ಕರ್ನಾಟಕ ವಿಧಾನಸಭೆ
ಮಂಗಳವಾರ 20ನೇ ಜುಲೈ 2004 ರಂದು
ಸದನವು ವಿಧಾನಸಭೆಯ
ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು
ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು

1) ಸಂತಾಪ ಸೂಚನೆಗಳು

ಅಧ್ಯಕ್ಷರು: ಲೋಕಸಭೆಯ ಹಾಲಿ ಮತ್ತು ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ರಾಮಚಂದ್ರ ವೀರಪ್ಪ ಹಾಗೂ ಲೋಕಸಭೆಯ ಮಾಜಿ ಸದಸ್ಯರು ಹಾಗೂ ಖ್ಯಾತ ಅರ್ಥಶಾಸ್ತ್ರಜ್ಞರಾದ ಶ್ರೀ ವೆಂಕಟಗಿರಿಗೌಡ ಅವರುಗಳು ನಿಧನರಾಗಿರುವುದನ್ನು ವಿಷಾದದಿಂದ ಸದನಕ್ಕೆ ತಿಳಿಸಬಯಸುತ್ತೇನೆ.

1. ಶ್ರೀ ರಾಮಚಂದ್ರ ವೀರಪ್ಪ

ಲೋಕಸಭೆಯ ಹಾಲಿ ಸದಸ್ಯರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ರಾಮಚಂದ್ರ ವೀರಪ್ಪ ಅವರು 1923ರಲ್ಲಿ ಬೀದರ್ ಜಿಲ್ಲೆಯ ಹುಮ್ನಾಬಾದ್‌ನಲ್ಲಿ ಜನಿಸಿದ್ದರು. ವೃತ್ತಿಯಲ್ಲಿ ಕೃಷಿಕರಾದ ಶ್ರೀಯುತರು 1934 ರಿಂದ ಸಮಾಜ ಸೇವಕರಾಗಿ ಸೇವೆ ಸಲ್ಲಿಸಿದ್ದು ರಾಜಕೀಯದಲ್ಲಿ ಸಕ್ರಿಯವಾಗಿ ಆಸಕ್ತಿಯುಳ್ಳವರು. ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀಯುತರು 1942ರಲ್ಲಿ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆ ವಾಸವಾಗಿದ್ದರು. ಶರಣ ಸಮಾಜದ ಸದಸ್ಯರಾಗಿ, 1962–67ರವರೆಗೆ ಬೀದರ್ ಜಿಲ್ಲಾ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರಾಗಿ, 1991–94ರವರೆಗೆ ಭಾರತೀಯ ಜನತಾ ಪಕ್ಷದ ಅಖಿಲ ಭಾರತ ಪರಿಶಿಷ್ಟ ಜಾತಿಯ ಸೆಲ್‌ನ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಶ್ರೀಯುತರು 1956 ರಿಂದ 1957ರವರೆಗೆ ರಾಜ್ಯ ವಿಧಾನ ಪರಿಷತ್ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಕರ್ನಾಟಕ ರಾಜ್ಯ ಪುನರ್ ವಿಂಗಡಣೆಯ ನಂತರ 1957 ರಿಂದ 1962ರವರೆಗೆ, ಹಾಗೂ 1983 ರಿಂದ 1985 ರವರೆಗೆ ವಿಧಾನ ಸಭೆಯ ಸದಸ್ಯರಾಗಿ, 1962, 1967, 1991, 1996, 1998, 1999 ಹಾಗೂ 2004ರಲ್ಲಿ ಒಟ್ಟು 7 ಬಾರಿ ಲೋಕಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 18ನೇ ಜುಲೈ, 2004 ರಂದು ನಿಧನ ಹೊಂದಿದರು.

2. ಶ್ರೀ ವೆಂಕಟಗಿರಿಗೌಡ

ಲೋಕಸಭೆಯ ಮಾಜಿ ಸದಸ್ಯರಾದ ಶ್ರೀ ವೆಂಕಟಗಿರಿಗೌಡ ಅವರು ದಿನಾಂಕ 26ನೇ ಜೂನ್, 1923ರಲ್ಲಿ ಚನ್ನಪಟ್ಟಣ ತಾಲ್ಲೂಕು ಬೈರಾಪಟ್ಟಣದಲ್ಲಿ ಜನಿಸಿದ್ದರು. ಲಂಡನ್‌ನಲ್ಲಿ ಅರ್ಥಶಾಸ್ತ್ರ ಅಧ್ಯಯನ ಮಾಡಿ, ಪಿ.ಹೆಚ್.ಡಿ. ಪದವೀಧರರಾದ ಶ್ರೀಯುತರು ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಅರ್ಥಶಾಸ್ತ್ರ ಅಧ್ಯಾಪಕರಾಗಿ ಸೇವೆ ಪ್ರಾರಂಭಿಸಿ, ನಂತರ ಬೆಂಗಳೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿ, ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದರು. ಅಪಾರ ವಿದ್ಯಾವಂತರಾಗಿ, ಉನ್ನತ ವ್ಯಕ್ತಿತ್ವದಿಂದ ಗಮನ ಸೆಳೆದಿದ್ದ ಅವರು ಸತ್ಯ–ಪ್ರಾಮಾಣಿಕತೆಗೆ ಹೆಸರಾಗಿದ್ದು, ವಿಶ್ವದ ಏಳು ಮಂದಿ ಪ್ರಸಿದ್ಧ ಅರ್ಥಶಾಸ್ತ್ರರಲ್ಲೊಬ್ಬರಾಗಿದ್ದರು. ನೇರ ನುಡಿಗೆ, ನಿಷ್ಠುರತನಕ್ಕೆ ಹೆಸರಾಗಿದ್ದ ಶ್ರೀಯುತರು ರಾಜ್ಯ ಮತ್ತು ರಾಷ್ಟ್ರದ ಅರ್ಥ ಸಚಿವರುಗಳಿಗೆ ಸಲಹೆ–ಸೂಚನೆಗಳನ್ನು ನೀಡುತ್ತಿದ್ದರು. ಶ್ರೀಯುತರು

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಲೋಕಸಭೆಗೆ 1991ರಲ್ಲಿ ಆಯ್ಕೆಯಾಗಿ 1996ರವರೆಗೆ ಸಂಸತ್ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಪ್ರಸ್ತುತ ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 5ನೇ ಜುಲೈ, 2004 ರಂದು ನಿಧನ ಹೊಂದಿದರು.

+ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ದಿವಂಗತ ಶ್ರೀ ರಾಮಚಂದ್ರ ವೀರಪ್ಪನವರು ಬೀದರ್ ಲೋಕಸಭಾ ಕ್ಷೇತ್ರದಿಂದ ಏಳು ಬಾರಿ ಲೋಕಸಭಾ ಸದಸ್ಯರಾಗಿ ಆರಿಸಿ ಬಂದಿದ್ದರು. ಹೈದರಾಬಾದ್ ಪ್ರಾಂತ್ಯದಿಂದ ರಾಜ್ಯ ವಿಧಾನ ಪರಿಷತ್‌ನ ಸದಸ್ಯರಾಗಿ ಕೂಡ ಆಯ್ಕೆಯಾಗಿದ್ದರು. ಒಂದು ಸಲ ಹುಲಸೂರು ಕ್ಷೇತ್ರದಿಂದಲೂ ಶಾಸಕರಾಗಿ ಆರಿಸಿ ಬಂದಿದ್ದರು. ಶ್ರೀ ರಾಮಚಂದ್ರ ವೀರಪ್ಪನವರ ವ್ಯಕ್ತಿತ್ವ ಹೇಗಿತ್ತು ಎಂದರೆ, ಅವರು ಬಿಜೆಪಿಯ ಸದಸ್ಯರಾಗಿದ್ದರೂ ಕೂಡ ಒಬ್ಬ ಜನ ಸಾಮಾನ್ಯರ ನೇತಾರರಾಗಿ ತಮ್ಮ ಜೀವನದುದ್ದಕ್ಕೂ ಕೆಲಸ-ಕಾರ್ಯಗಳನ್ನು ಮಾಡಿದ್ದಾರೆ. ನನಗೆ ಬಹಳ ವೈಯಕ್ತಿಕವಾಗಿ ಅವರ ಪರಿಚಯ ಇತ್ತು. ಅವರು ಯಾವಾಗಲೂ ಕೂಡ ನೇರವಾಗಿ ನನ್ನನ್ನಾಗಲೀ ಅಥವಾ ಮಾನ್ಯ ಖರ್ಗೆಯವರನ್ನಾಗಲೀ ನಮ್ಮ ಹೈದರಾಬಾದ್-ಬೀದರ್ ಭಾಷೆಯಲ್ಲಿ 'ದೋಸ್ತಿ, ಏನು ನಡೆಯುತ್ತಿದೆ' ಎಂದು ಕೇಳುತ್ತಿದ್ದರು. ನನಗೆ ತಿಳಿದ ಪ್ರಕಾರ ಅವರು ಸಾಮಾನ್ಯ ಜನರ ಜೊತೆಗೆ ನೇರ ಸಂಪರ್ಕವನ್ನು ಇಟ್ಟುಕೊಂಡಂತಹ ವ್ಯಕ್ತಿಯಾಗಿದ್ದರು. ನಿನ್ನೆ ಬಜೆಟ್ ಅಧಿವೇಶನ ಇದ್ದುದ್ದರಿಂದ ನಾನು ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಆದರೆ ಭಾಗವಹಿಸಬೇಕೆಂಬ ಮನಸ್ಸು ನನ್ನದಾಗಿತ್ತು. ನಿಜಾಮರ ವಿರುದ್ಧ ಹೋರಾಟ ಮಾಡತಕ್ಕಂಥ ರೀತಿಯಲ್ಲಿ ದಿವಂಗತರು ಆಗಿನ ಕಾಲದಲ್ಲಿ ಚಳವಳಿಯನ್ನು ಮಾಡಿದರು. ಇದಕ್ಕಿಂತ ಮೊದಲು ಸ್ವಾತಂತ್ರ್ಯ ಹೋರಾಟಗಾರರಾಗಿಯೂ ಶ್ರೀಯುತರು ಚಳವಳಿಯನ್ನು ಮಾಡಿದ್ದರು. ಅವರು ಒಮ್ಮೆ ಬಾಂಬ್ ಹಾಕತಕ್ಕಂಥ ಸಂದರ್ಭದಲ್ಲಿ ಅವರ ಕೈಗೆ ಬಾಂಬ್ ತಗುಲಿ ಅವರಿಗೆ ಸಾಕಷ್ಟು ತೊಂದರೆ ಕೂಡ ಆಗಿತ್ತು. ಅವರು ಬಹಳ ಧೈರ್ಯವಂತರು ಮತ್ತು ಸಾಹಸಿಗರಾಗಿದ್ದು, ಎಲ್ಲರನ್ನೂ ಕೂಡ ಬಹಳ ಪ್ರೀತಿಯಿಂದ ಏಕ ವಚನದಲ್ಲಿ ಪ್ರಸ್ತಾಪ ಮಾಡತಕ್ಕಂಥ ಆ ಒಂದು ಕಮ್ಯಾಂಡಿಂಗ್ ಅವರ ವ್ಯಕ್ತಿತ್ವದಲ್ಲಿತ್ತು. ನಿನ್ನೆ ಮಾಜಿ ಉಪ ಪ್ರಧಾನ ಮಂತ್ರಿಗಳು ಹಾಗೂ ಹಾಲಿ ಲೋಕಸಭೆಯ ವಿರೋಧ ಪಕ್ಷದ ನಾಯಕರಾದ ಮಾನ್ಯ ಲಾಲ್‌ಕೃಷ್ಣ ಅಡ್ವಾನಿಯವರು, ಮಾನ್ಯ ವೆಂಕಯ್ಯ ನಾಯ್ಡುರವರು ಮತ್ತು ಮಾನ್ಯ ಅನಂತಕುಮಾರ್‌ರವರು ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದರು. ಸರ್ಕಾರದ ಪ್ರತಿನಿಧಿಯಾಗಿ ಸಚಿವರಾದ ಶ್ರೀ ಮಿರಾಜುದ್ದೀನ್ ಪಟೇಲ್‌ರವರೂ ಕೂಡ ಭಾಗವಹಿಸಿದ್ದರು. ನಾನು ಮೊದಲೇ ಘೋಷಿಸಿದ್ದಂತೆ ಅವರ ಅಂತ್ಯಕ್ರಿಯೆ ಸರ್ಕಾರಿ ಮರ್ಯಾದೆಯೊಡನೆ ನಡೆಯಿತು. ಶ್ರೀಯುತ ಭೀಮಣ್ಣ ಖಂಡ್ರೆಯವರೂ ಸಹ ಅಂದು ಅಲ್ಲಿದ್ದರು. ಅವರು ಮತ್ತು ಭೀಮಣ್ಣ ಖಂಡ್ರೆಯವರು ರಾಜಕೀಯವಾಗಿ ಬೇರೆ ಬೇರೆ ಪಕ್ಷಗಳಲ್ಲಿದ್ದರೂ ಕೂಡ ಒಳ್ಳೆಯ ಸ್ನೇಹಿತರಾಗಿದ್ದರು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಅವರು ಕೇವಲ ದಲಿತ ವರ್ಗಕ್ಕೆ ಮಾತ್ರ ಸೇರಿದವರಾಗಿರಲಿಲ್ಲ, ಎಲ್ಲಾ ವರ್ಗದ ನಾಯಕರಾಗಿ ಮತ್ತು ಎಲ್ಲಾ ಜನರ ಪ್ರೀತಿಗೆ ಪಾತ್ರರಾಗಿ ಅವರು ತಮ್ಮ ಜೀವನ ಕಾಲದಲ್ಲಿ ಸೇವೆ ಸಲ್ಲಿಸಿದ್ದರು. ಚುನಾವಣೆ ಬಂದಾಗ ಬೀದರ್ ಲೋಕಸಭಾ ಕ್ಷೇತ್ರದಿಂದ ಶ್ರೀ ರಾಮಚಂದ್ರ ವೀರಪ್ಪನವರ ವಿರುದ್ಧ ಯಾರನ್ನು ನಿಲ್ಲಿಸುವುದು

ಎಂಬ ಪ್ರಶ್ನೆ ಉದ್ಭವವಾಗಿತ್ತು. ಏಳು ಬಾರಿ ಆಯ್ಕೆಯಾಗಿದ್ದೇ ಅವರ ಪರವಾಗಿ ಇದ್ದ ಜನಾಭಿಪ್ರಾಯವನ್ನು ಸೂಚಿಸುತ್ತದೆ. ಅವರು ಬೀದರ್ ಮೀಸಲು ಲೋಕಸಭಾ ಕ್ಷೇತ್ರದಿಂದ ಸಂಸತ್ ಸದಸ್ಯರಾಗಿ ಗೆದ್ದು ಅವರ ಪಕ್ಷಕ್ಕೂ ಕೂಡ ಶ್ರೇಯಸ್ಸನ್ನು ತಂದಿದ್ದರು. ಶ್ರೀ ಚಂದ್ರಶೇಖರ ಪಾಟೀಲ್ ಎಂಬುವವರು ಮೊದಲು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದರು. ಅವರು ಶ್ರೀ ವೀರೆಂದ್ರ ಪಾಟೀಲರ ಕಾಲದಲ್ಲಿ 1952 ಮತ್ತು 1957ರಲ್ಲಿ ಶಾಸಕರಾಗಿದ್ದರು.

ಅವರ ಜೊತೆಗೆ ಕೆಲಸ ಮಾಡಿದಂತಹ ಒಬ್ಬ ಮೇಧಾವಿ. ಇವರು ಸಾಮಾನ್ಯ ಜನರಲ್ಲಿ ಬೆರೆತು ಕೆಲಸ ಮಾಡಿದಂತಹ ವ್ಯಕ್ತಿ. ಲೋಕಸಭೆಯು ಬಹಳ ಹಳೆಯ ಮೇಧಾವಿಯನ್ನು ಹಾಗೂ ಹಾಲಿ ಪಾರ್ಲಿಮೆಂಟ್ ಸದಸ್ಯರನ್ನು ಕಳೆದುಕೊಂಡಂತಾಗಿದೆ. ನಿನ್ನೆ ಕೂಡ ಎಲ್ಲರೂ ಸಂತಾಪವನ್ನು ವ್ಯಕ್ತ ಮಾಡಿದ್ದಾರೆ. ನಮ್ಮ ಭಾಗದ ಒಬ್ಬ ಧೀಮಂತ ನಾಯಕ, ಲೋಕಸಭೆ ಸದಸ್ಯ ಮತ್ತು ಜನರೆಲ್ಲರ ಮನಸ್ಸಿನಲ್ಲಿ ಮನೆ ಮಾಡಿಕೊಂಡಂತಹ ಶ್ರೀ ರಾಮಚಂದ್ರ ವೀರಪ್ಪ ಅವರ ನಿಧನದಿಂದ ನಮ್ಮ ಭಾಗಕ್ಕೆ, ವಿಶೇಷವಾಗಿ ರಾಜ್ಯಕ್ಕೆ ಹಾಗೂ ದೇಶಕ್ಕೆ ಒಬ್ಬ ಸಂಸದನನ್ನು ಕಳೆದುಕೊಂಡು ನಷ್ಟವಾಗಿದೆ. ಬೀದರ್‌ನಲ್ಲಿ ಆ ಒಂದು ಜನಸ್ತೋಮವನ್ನು ಜನರಿಂದ ಕೇಳಿ ಹಾಗೂ ಟಿ.ವಿ.ಯಲ್ಲಿ ನೋಡುತ್ತಿದ್ದರೆ, ಬಹಳ ಜನ ಭಕ್ತಿಯಿಂದ, ಒಳ್ಳೆಯ ಮನಸ್ಸಿಂದ ಪಾಲ್ಗೊಂಡಿದ್ದಾರೆ. ಅಂತಹವರನ್ನು ಇವತ್ತು ನಾವು ಸದನದಲ್ಲಿ ನೆನಸುತ್ತಿದ್ದೇವೆ. ಮತ್ತು ಅವರ ಕುಟುಂಬಕ್ಕೆ ಇವತ್ತು ಏನು ತುಂಬಲಾರದ ದುಃಖವಾಗಿದೆ, ಆ ದುಃಖದಲ್ಲಿ ತಮ್ಮ ಜೊತೆ ನಾನು ಕೂಡ ಭಾಗಿಯಾಗಿ ಸದನದ ಮೂಲಕ ಅವರಿಗೆ ಸಂತಾಪವನ್ನು ಸೂಚಿಸುತ್ತೇನೆ. ಇನ್ನು ಮಾನ್ಯ ವೆಂಕಟಗಿರಿ ಗೌಡರು ಬಹಳ ದೊಡ್ಡ ಅರ್ಥಶಾಸ್ತ್ರಜ್ಞರಾಗಿದ್ದರು. ಪಾರ್ಲಿಮೆಂಟ್‌ನ ಸದಸ್ಯರೂ ಆಗಿದ್ದರು. ಮತ್ತು ಈಗಿನ ಪ್ರಧಾನಮಂತ್ರಿಗಳಾದಂತಹ ಮಾನ್ಯ ಮನಮೋಹನ್ ಸಿಂಗ್ ಅವರ ಜೊತೆಯಲ್ಲಿ ಅಭ್ಯಾಸ ಮಾಡಿದ್ದಾರೆ. ಅವರಿಗೆ ನಿಕಟವಾದಂತಹ ಆತ್ಮೀಯರು. ಅವರು ಅಂತರಾಷ್ಟ್ರೀಯ ಹಣಕಾಸು ನಿರ್ವಹಣೆಯ ವಿಚಾರದಲ್ಲಿ ಬಹಳಷ್ಟು ಪುಸ್ತಕಗಳನ್ನು ಬರೆದಿದ್ದಾರೆ. ಹಾಗೂ ಬೆಳಕು ಚೆಲ್ಲಿದ್ದಾರೆ. ಅವರ ಪ್ರತಿಭೆ ಏನಿದೆ ಆರ್ಥಿಕ ಜಗತ್ತಿನಲ್ಲಿ ಆರ್ಥಿಕ ತಜ್ಞನಾಗಿ ಈ ದೇಶಕ್ಕೆ ಒಂದು ಕೊಡುಗೆ ಕೊಟ್ಟಿದ್ದಾರೆ. ಹಾಗೂ ಒಕ್ಕಲಿಗರ ಸಂಘದ ಅಧ್ಯಕ್ಷರಾಗಿ ಕೂಡ ಆ ಸಮಾಜಕ್ಕೆ ಸೇವೆ ಸಲ್ಲಿಸಿದ್ದಾರೆ. ಅವರು, ನಾನು ಗೃಹಸಚಿವನಾಗಿದ್ದಾಗ ಒಂದು ಪತ್ರವನ್ನು ಬೇರೆ ವಿಷಯ ಪ್ರಸ್ತಾಪ ಮಾಡುವ ವಿಚಾರಕ್ಕೆ ಬರೆದು ನಂತರ ಮತ್ತೊಂದು ಪತ್ರ ಬರೆದರು. ನಂತರ ಏನ್ರಿ ನೀವು ನಮ್ಮ ಪತ್ರಕ್ಕೆ ಉತ್ತರವೇ ಇಲ್ಲ, ನೀವೇನು ಕ್ರಮ ತೆಗೆದು ಕೊಂಡಿರುವುದು ಎಂದು ಹೇಳುವಂತಹ ಧಾಟಿಯನ್ನು ನೋಡಿದರೆ, ಆ ಒಂದು ಕಾಮ್ಯಾಂಡಿಂಗ್ ನೋಡಿದರೆ, ಅವರು ಬಹಳಷ್ಟು ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುತಕ್ಕಂಥ ಸಮಾಜದ ಬಗ್ಗೆ ಚಿಂತನೆ ಮಾಡತಕ್ಕಂಥ ಎಕಾನಾಮಿಸ್ಟ್ ಆಗಿದ್ದರು. ಅಂತಹವರು ಬಹಳ ವಿರಳ. ನಾವು ರಾಜಕಾರಣಿಗಳು ಬಹಳಷ್ಟು ಜನ ಸಿಗಬಹುದು, ಆದರೆ ಅವರು ಒಳ್ಳೆಯ ಅರ್ಥಶಾಸ್ತ್ರಜ್ಞರಾಗಿ ರಾಜ್ಯಕ್ಕೆ ಸೇವೆ ಸಲ್ಲಿಸಿದ್ದಾರೆ. ಅದಕ್ಕೆ ನಾನು ಈ ಸದನದಲ್ಲಿ ತಮ್ಮ ಮೂಲಕ ಅವರ ಮನೆಯವರಿಗೆ ದುಃಖದಲ್ಲಿ ಪಾಲ್ಗೊಳ್ಳತಕ್ಕಂಥ ಮಾತನ್ನು ಹೇಳುತ್ತಿದ್ದೇನೆ. ಇನ್ನು ತಮ್ಮ ಸಮಕ್ಷಮದಲ್ಲಿ ತಾವು ಪರವಾನಗಿ ಕೊಟ್ಟರೆ, ತಮಿಳುನಾಡಿನ ಕುಂಭಕೋಣಂನಲ್ಲಿ ಆದಂತಹ ಘಟನೆಯಲ್ಲಿ 90 ಜನ ಮಕ್ಕಳು ಮೃತಪಟ್ಟಿದ್ದಾರೆ. ಇದರಿಂದ ದೇಶದಲ್ಲಿ ಇರತಕ್ಕಂಥ ತಂದೆ ತಾಯಿಗಳಿಗೆ ಹಾಗೂ ಮಕ್ಕಳಿಗೆ ಅಪಾರವಾದ ದುಃಖ ಉಂಟಾಗಿದೆ.

ಇಂತಹ ಒಂದು ಅಗ್ನಿದುರಂತದಲ್ಲಿ ಅನಾಹುತಕೊಳ್ಳಗಾದ ಮಕ್ಕಳಿಗೆ ಹಾಗೂ ತಂದೆ ತಾಯಿಗಳಿಗೆ ಏನು ದುಃಖವಾಗಿದೆ, ಇದು ಬಹಳ ಘೋರ ದುರಂತ. ಇದರ ಬಗ್ಗೆ ನಮಗೆ ಎಂತಹ ಶಬ್ದಗಳಲ್ಲಿ ಕೂಡ ದುಃಖವನ್ನು ವ್ಯಕ್ತ ಮಾಡುವುದಕ್ಕೆ ಆಗುವುದಿಲ್ಲ. ಇಂತಹ ಒಂದು ದುರಂತ ತಮಿಳುನಾಡಿನಲ್ಲಿ ಎಂದೆಂದೂ ಅಗದಂತಹ ಘಟನೆಯಾಗಿದೆ. ದೇಶದ ಎಲ್ಲಾ ಕಡೆಯಿಂದಲೂ ಹಾಗೂ ಲೋಕಸಬೆಯಲ್ಲಿ ಕೂಡ ಇದರ ಬಗ್ಗೆ ಸಂತಾಪಸೂಚನೆಯನ್ನು ಮಾಡಿದ್ದಾರೆ. ಇದೊಂದು ದೊಡ್ಡ ದುರಂತವಾಗಿದೆ. ನಾವೇನಾದರೂ ಕೂಡ ಕ್ರಮವನ್ನು ತೆಗದುಕೊಳ್ಳಬೇಕೆಂದರೆ ಘಟನೆ ಆದ ಮೇಲೆ ತೆಗೆದುಕೊಳ್ಳುತ್ತೇವೆ. ನಾನೂ ಕೂಡ ಇವತ್ತು ಆ ಘಟನೆಯ ಹಿನ್ನೆಲೆಯಲ್ಲಿ ಎಲ್ಲಾ ಶಾಲಾ ಕಾಲೇಜುಗಳಿಗೆ ಇಂತಹ ದುರಂತವಾಗಬಾರದು ಎಂದು ಹೇಳಿ ಎಲ್ಲಾ ಕಡೆ ಆದೇಶ ಕೊಟ್ಟಿದ್ದೇನೆ. ಅದಕ್ಕೆ ತಾವು ಅನುಮತಿ ಕೊಟ್ಟಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಅದರ ಬಗ್ಗೆ ಹೇಳುತ್ತಾರೆ. ಮಾನ್ಯ ರಾಮಚಂದ್ರ ವೀರಪ್ಪ, ಮಾನ್ಯ ವೆಂಕಟಗಿರಿಗೌಡ ಹಾಗೂ ಕುಂಭಕೋಣಂನಲ್ಲಿ ಆದಂತಹ ಘಟನೆ ಬಗ್ಗೆ ಈ ಸಭೆ ಮಂಡಿಸಿರುವ ಸಂತಾಪ ಸೂಚನಾ ನಿರ್ಣಯವನ್ನು ಅನುಮೋದಿಸುತ್ತೇನೆ.

+ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ತಾವು ತಂದಿರುವಂತಹ ಸಂತಾಪ ಸೂಚನೆಗೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಏನು ಧ್ವನಿಗೂಡಿಸಿದ್ದಾರೆ ಅದಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ 96 ವರ್ಷದ ಒಬ್ಬ ಸೋಲಿಲ್ಲದ ಸರದಾರ, ಅಜಾತ ಶತ್ರು, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ 1942ರಲ್ಲಿ ಅಸಹಕಾರ ಚಳುವಳಿಯಲ್ಲಿ ಜೈಲು ಸೇರಿ, ಏಳು ಬಾರಿ ಲೋಕಸಭಾ ಸದಸ್ಯರಾಗಿ, ವಿಧಾನ ಪರಿಷತ್ತಿನ ಸದಸ್ಯರಾಗಿ, ಶಾಸಕರಾಗಿ ಸೇವೆ ಸಲ್ಲಿಸಿದಂತಹ ಮಹಾನ್ ವ್ಯಕ್ತಿಯಾದ ಶ್ರೀ ರಾಮಚಂದ್ರ ವೀರಪ್ಪನವರನ್ನು ನಾವು ಕಳೆದು ಕೊಂಡಿದ್ದೇವೆ. ಶ್ರೀ ರಾಮಚಂದ್ರ ವೀರಪ್ಪನವರು ಸರಳ ಸಜ್ಜನಿಕೆಯ ವ್ಯಕ್ತಿ ಎಂದರೆ ತಪ್ಪಾಗಲಾರದು. ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಅವರು ಪರಿಶಿಷ್ಟ ವರ್ಗದ ಜನಾಂಗಕ್ಕೆ ಸೇರಿದ್ದರೂ ಕೂಡ ಆ ಭಾಗದ ಎಲ್ಲಾ ವರ್ಗದ ಜನರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಅವರು ಕಾಂಗ್ರೆಸ್ಸ್ ಪಕ್ಷವನ್ನು ಬಿಟ್ಟರು. ಬಿಜೆಪಿ ಸೇರಿ ಐದು ಬಾರಿ ಲೋಕಸಭಾ ಸದಸ್ಯರಾದರು. ಆದರೆ ಎಂದೂ ಸಹ ಅವರು ಕಾಂಗ್ರೆಸ್‌ನವರ ಪ್ರೀತಿ ವಿಶ್ವಾಸಕ್ಕೆ ಧಕ್ಕೆ ಬರದ ಹಾಗೆ ನಡೆದುಕೊಂಡರು. ಆಶ್ಚರ್ಯವೆಂದರೆ, ನಾವು ಲೋಕಸಭೆಯಲ್ಲಿ ನಮ್ಮ ಸದಸ್ಯರು ಗೆದ್ದರು ಎಂದರೆ, ಮನಸ್ಸಿನಲ್ಲಿ ನಮ್ಮ ಕಾಂಗ್ರೆಸ್ಸ್‌ನ ಸ್ನೇಹಿತರೂ ಸಹ ಒಬ್ಬ ಅಜಾತಶತ್ರು ಗೆದ್ದರು ಎಂದು ಸಂತೋಷಪಟ್ಟು ಅವರಿಗೆ ಎಲ್ಲಾ ರೀತಿಯ ಸಹಕಾರ ಕೊಡುತ್ತಿದ್ದುದ್ದನ್ನು ಪ್ರತ್ಯಕ್ಷವಾಗಿ ನಾನು ಕಣ್ಣಾರೆ ನೋಡಿದ್ದೇನೆ. ಒಂದು ಬಾರಿ ಪ್ರಧಾನಿಯವರಾದಂತಹ ಶ್ರೀ ನರಸಿಂಹರಾಯರನ್ನು ಭೇಟಿ ಮಾಡುವುದಕ್ಕೆ ಹೋದಾಗ ಎಷ್ಟೊಂದು ಸರಳವಾಗಿ ಪ್ರಧಾನಿಯವರ ಜೊತೆ ಇದ್ದರು ಎಂದರೆ, ಅವರ ಕೈ ಹಿಡಿದು ಎಳೆದುಕೊಂಡು ಬಂದು ಗ್ರೂಪ್ ಫೋಟೋಗೆ ಕೂರಿಸಿದರು. ಒಂದು ಸಲ ಅವರು ಯಾವುದೋ ಕಡೆ ಹೋಗುತ್ತಿದ್ದಾಗ ನರಸಿಂಹರಾಯರೇ ಬನ್ನಿ, ನಮ್ಮ ಪ್ರಮುಖರು ಎಲ್ಲಾ ಬಂದಿದ್ದಾರೆ ಎಂದು ಪ್ರಧಾನಿಯವರಿಗೆ ಹೆಸರು ಹಿಡಿದು ಅವರು ಕರೆದರೆ ಪ್ರಧಾನಿ ನರಸಿಂಹರಾಯರಿಗೆ ಆನಂದ. ಆದೇ ರೀತಿ ಅವರ ಕಾಲದಲ್ಲಿ ಆಗಿ ಹೋದಂತಹ ಎಲ್ಲಾ ಪ್ರಧಾನಿಗಳ ಜೊತೆ ಇದೇ ರೀತಿ ನಿಕಟ ಸಂಬಂಧವನ್ನು ಇಟ್ಟುಕೊಂಡಿದ್ದರು. ಬಹುಶಃ

ದೇಶದ ಇತಿಹಾಸದಲ್ಲಿ ಅಥವಾ ಪ್ರಪಂಚದ ಇತಿಹಾಸದಲ್ಲಿ ಒಂದು ಗಿನ್ನಿಸ್ ದಾಖಲೆಗೆ ಸೇರಬೇಕು. 96 ವರ್ಷದ ಒಬ್ಬ ವ್ಯಕ್ತಿ ಲೋಕಸಭಾ ಸದಸ್ಯರಾಗಿದ್ದರು ಎನ್ನುವಂತಾದ್ದು ನನಗೆ ನೆನಪಿದ್ದ ಹಾಗೆ ದೇಶದ ಅಥವಾ ಪ್ರಪಂಚದ ಇತಿಹಾಸದಲ್ಲಿ ಬೇರೆ ಯಾವುದೇ ಉದಾಹರಣೆ ಇದೆಯೆಂಬುದು ನನಗೆ ಗೊತ್ತಿಲ್ಲ. ಹೋದಬಾರಿ ಚುನಾವಣೆಗೆ ಸೀಟು ಕೊಡುವಂತಹ ಸಂದರ್ಭ ಬಂದಾಗ, ಅವರಿಗೆ ವಯಸ್ಸಾಗಿದೆ, ಬೇರೆ ಯಾರಿಗಾದರೂ ಕೊಡಬಹುದೇ ಎಂದು ಚರ್ಚೆಯಾದಾಗ ಪ್ರಧಾನಿ ಆಟಲ್ ಬಿಹಾರಿ ವಾಜಪೇಯಿ ಅವರು, ಯಾವ ಕಾರಣಕ್ಕೂ ಅವರು ಇರುವವರೆಗೂ ಲೋಕಸಭಾ ಸದಸ್ಯರು ಅವರೇ ಎಂದು ಹೇಳಿದರು. ಅವರು ಎಷ್ಟು ಕೆಲಸ ಮಾಡುತ್ತಾರೆ ಎಂದು ಅದರ ಬಗ್ಗೆ ನೀವು ಚಿಂತೆ ಮಾಡುವ ಅಗತ್ಯ ಇಲ್ಲ, ಅವರ ಬಗ್ಗೆ ನೀವು ಪುನರ್ ಪರಿಶೀಲನೆ ಮಾಡುವ ಪ್ರಶ್ನೆಯೇ ಇಲ್ಲವೆಂದು ಹೇಳಿ ಈ ರೀತಿಯಾದಂತಹ ಆದೇಶವನ್ನು ನಮಗೆ ಕೊಟ್ಟರು. ಇಂತಹ ಒಬ್ಬ ವ್ಯಕ್ತಿಯನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ ಎಂದೂ ಯಾವುದೇ ಸ್ಥಾನಮಾನಕ್ಕೂ ಅಪೇಕ್ಷೆಪಟ್ಟಂತಹ ವ್ಯಕ್ತಿಯಲ್ಲ. ಅಂತಹ ಒಬ್ಬ ಹಿರಿಯ ವ್ಯಕ್ತಿ ನಮ್ಮ ಜೊತೆ ಇಲ್ಲ. ಇದರಿಂದ ಕೇವಲ ನಮ್ಮ ಪಕ್ಷಕ್ಕೆ ನಷ್ಟವಾಯಿತು ಎನ್ನುವುದಕ್ಕಿಂತ ಇಡೀ ನಾಡಿನ ಜನತೆಗೆ ದೊಡ್ಡ ನಷ್ಟವಾಗಿದೆ. ಅಂತಹ ಅನುಭವಿ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಶಾಂತಿ ಕೋರುವುದರ ಜೊತೆಗೆ ಅವರ ಕುಟುಂಬ ವರ್ಗಕ್ಕೆ, ಅವರ ಅಭಿಮಾನಿಗಳಿಗೆ, ವಿಶೇಷವಾಗಿ ಹಿತೈಷಿಗಳಿಗೆ ಅವರು ಆಗಲಿದ ದುಃಖವನ್ನು ತಡೆಯುವ ಶಕ್ತಿಯನ್ನು ಭಗವಂತ ಕೊಡಲಿ ಎಂದು ಪ್ರಾರ್ಥನೆ ಮಾಡುತ್ತಾ, ಸನ್ಮಾನ್ಯ ವೆಂಕಟಗಿರಿ ಗೌಡರನ್ನು ಇತ್ತೀಚೆಗೆ ನಾವು ಬಿಜೆಪಿಯಿಂದ ಲೋಕಸಭೆ ಸದಸ್ಯರನ್ನಾಗಿ ಮಾಡಿದಾಗಿನಿಂದಲೂ ನನಗೆ ನಿಕಟ ಸಂಬಂಧ. ನಿಮಗೆ ಒಂದು ಮಾತು ಹೇಳುವುದಾದರೆ, ಅವತ್ತು ಯಾರು ಲೋಕಸಭೆ ಸದಸ್ಯರಾಗಿ ಸ್ಪರ್ಧೆ ಮಾಡಬೇಕೆಂದು ಪಟ್ಟಿ ಮಾಡುವ ಸಂದರ್ಭದಲ್ಲಿ ನಾನು ಪಕ್ಷದ ಅಧ್ಯಕ್ಷನಾಗಿದ್ದೆ. ಆಗ ಅವರು ನಮ್ಮ ಪಕ್ಷದಲ್ಲಿ ಇರಲಿಲ್ಲ, ಅವತ್ತು ಬಿಜೆಪಿ ಸದಸ್ಯರೂ ಆಗಿರಲಿಲ್ಲ. ಕೊನೆಯಗಳಿಗೆಯಲ್ಲಿ ಅನೇಕ ಹಿರಿಯರು, ಆರ್ಥಿಕ ತಜ್ಞರು, ಪ್ರಮುಖರು ಹೀಗೆ ಅನೇಕ ಜನ ದೂರವಾಣಿ ಮೂಲಕ ಸಂಪರ್ಕ ಮಾಡಿದರೂ, ನಾನು ಆ ಪಟ್ಟಿ ತೆಗೆದುಕೊಂಡು ಪತ್ರಿಕಾ ಗೋಷ್ಠಿಗೆ ಹೋಗುವುದಕ್ಕಿಂತ ನಾಲ್ಕೈದು ನಿಮಿಷದ ಮುಂಚೆ, ನಮ್ಮ ಪ್ರಮುಖರ ಜೊತೆ ಸಮಾಲೋಚನೆ ಮಾಡಿ ನಾನು ನಿಮ್ಮ ಪಾರ್ಟಿಯಿಂದ ನಿಲ್ಲುತ್ತೇನೆ ಎಂದು ಹೇಳಿದಾಗ, ಬಿಜೆಪಿ ಸದಸ್ಯರು ಎಂದು ಮೆಂಬರ್‌ಶಿಪ್ ಮಾಡದೆ ಕೊನೆಯಲ್ಲಿ ಸನ್ಮಾನ್ಯ ವೆಂಕಟಗಿರಿಗೌಡರು ಸ್ಪರ್ಧೆ ಮಾಡುತ್ತಾರೆ ಎಂದು ಸೇರಿಸಿ ನಾನು ಪತ್ರಿಕಾಗೋಷ್ಠಿಯಲ್ಲಿ ಅವರ ಹೆಸರನ್ನು ಬಿಡುಗಡೆ ಮಾಡಿದೆ.

ದೇಶದ ನಾಲ್ಕಾರು ಜನ ಆರ್ಥಿಕ ತಜ್ಞರಲ್ಲಿ ಅವರೊಬ್ಬ ಹಿರಿಯ ವ್ಯಕ್ತಿಯೆಂದು ನಾನು ಹೇಳುವಂತಹ ಅಗತ್ಯವಿಲ್ಲ. ಇವತ್ತು ಅಂತಹ ಹಿರಿಯ ವ್ಯಕ್ತಿಯೊಬ್ಬರನ್ನು ನಾವು ಕಳೆದುಕೊಂಡಿದ್ದೇವೆ. ಸನ್ಮಾನ್ಯ ಮುಖ್ಯಮಂತ್ರಿಯವರು ಈಗತಾನೇ ಕುಂಭಕೋಣಂನಲ್ಲಿ ನಡೆದ ಬೆಂಕಿ ದುರಂತದ ಬಗ್ಗೆ ಪ್ರಸ್ತಾಪ ಮಾಡಿದರು. ಇದರಲ್ಲಿ 90 ಹಸುಗೂಸುಗಳು ಜಗತ್ತಿನ ಯಾವುದೇ ಪರಿವೆಯೇ ಇಲ್ಲದೆ, ಏನೇನು ಆಸೆ, ಅಪೇಕ್ಷೆಗಳನ್ನು ಇಟ್ಟುಕೊಂಡಿದ್ದರೋ, ಗೊತ್ತಿಲ್ಲ. ಅವರು ಇವತ್ತು ಆಗ್ನಿಗೆ ಆಹುತಿಯಾಗಿದ್ದಾರೆ. ಇಲ್ಲಿ ನಾವು ಒಂದು ವಿಷಯವನ್ನು ಗಮನಿಸಬೇಕಾದದ್ದು, ಏನೆಂದರೆ ಆ ಮುಗ್ಧ ಮಕ್ಕಳು ಎಷ್ಟು ಪರಿಶುದ್ಧವಾಗಿ ಇರುತ್ತಾರೆಂದರೆ, ಅಲ್ಲಿ ಬೆಂಕಿ ಹತ್ತಿಕೊಂಡಿದೆ, ಇಲ್ಲಿ ನಾನು

ಆ ಶಾಲಾ ಉಪಾಧ್ಯಾಯರನ್ನು ದೂಷಿಸುವುದಿಲ್ಲ. ಇಲ್ಲಿ ಅವರು ಬೆಂಕಿ ಆರಿಹೋಗುತ್ತದೆಂಬ ಕಲ್ಪನೆಯನ್ನು ಇಟ್ಟುಕೊಂಡಿದ್ದರೋ, ಏನೋ ಅಥವಾ ಅವರ ಬೇಜವಾಬ್ದಾರಿಯಿಂದ ನಡೆಯಿತೋ ಗೊತ್ತಿಲ್ಲ. ಮಕ್ಕಳು ಬೆಂಕಿಯನ್ನು ಕಂಡು ಎದ್ದರೆ, ಇವರು ಮಕ್ಕಳನ್ನು ಶಾಂತವಾಗಿ ಕುಳಿತುಕೊಳ್ಳಿ ಎಲ್ಲಾ ಸರಿಹೋಗುತ್ತದೆ ಎಂದು ಹೇಳಿದ್ದಾರೆ. ಆ ಶಿಕ್ಷಕರ ಮಾತಿಗೆ ಬೆಲೆಕೊಟ್ಟು ಆ ಮುಗ್ಧ ಮಕ್ಕಳು ಕೈಕಟ್ಟಿ ಕುಳಿತಿದ್ದರಿಂದ, ಇವತ್ತು ನಾವು ಆ 90 ಮಕ್ಕಳನ್ನು ಕಳೆದುಕೊಂಡಿದ್ದೇವೆ. ಈ ಹಸುಗೂಸಿನ ಮನಸ್ಸು ಎಷ್ಟು ಪರಿಶುದ್ಧವಾಗಿರುತ್ತದೆಂಬುದನ್ನು ಸಹ ನಾವು ಈ ಸಂದರ್ಭದಲ್ಲಿ ಗಮನಿಸಬೇಕು. ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇವತ್ತು ಕುಂಭಕೋಣಂನಲ್ಲಿ 90 ಮಕ್ಕಳು ಬೆಂಕಿಗೆ ಆಹುತಿಯಾಗಿದ್ದಾರೆ, ಎಂಬುದು ಒಂದು ಭಾಗವಾದರೆ, ಇಲ್ಲಿ ನಾವು ಏನು ಶಾಲೆಗಳನ್ನು ನಡೆಸುತ್ತಿದ್ದೇವೆ, ಇದು ಒಂದು ರೀತಿಯಲ್ಲಿ ಗುಡಿಸಲುಗಳಲ್ಲಿ ಉಸಿರು ಕಟ್ಟುವಂತಹ ಪರಿಸ್ಥಿತಿಯಲ್ಲಿ, ಮುಂದಿನ ಭಾವಿ ಪ್ರಜೆಗಳನ್ನು ಬೆಳೆಸುತ್ತಿರುವಂತಹ ರೀತಿ, ಮತ್ತು ಅವರಿಗೆ ಕೊಡುತ್ತಿರುವಂತಹ ಶಿಕ್ಷಣ, ಇವೆಲ್ಲವನ್ನು ನೋಡಿದರೆ, ನಮಗೆ ಸ್ವಾತಂತ್ರ್ಯ ಬಂದು 57 ವರ್ಷಗಳ ನಂತರವೂ ಸಹ, ನಮ್ಮ ಮಕ್ಕಳ ಪ್ರಾಥಮಿಕ ಶಿಕ್ಷಣ ಗ್ರಾಮೀಣ ಪ್ರದೇಶಗಳಲ್ಲಿ ಈ ರೀತಿ ಇದೆಯಲ್ಲ, ಎಂಬ ವಿಷಯವನ್ನು ಸಹ ನಾವು ಗಮನಿಸಬೇಕಾಗುತ್ತದೆ. ಅದುದರಿಂದ ಈ ಎಲ್ಲಾ ಸಂಗತಿಗಳ ಬಗ್ಗೆ ಸರ್ಕಾರ ವಿಶೇಷಾದಂತಹ ಗಮನವನ್ನು ನೀಡಬೇಕೆಂದು ಹೇಳುತ್ತಾ, ಈ ಸಂದರ್ಭದಲ್ಲಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ, ಈ ಮಕ್ಕಳ ತಂದೆ, ತಾಯಿಗಳ ಗೋಳಿನ ವಿಚಾರವನ್ನು ಪತ್ರಿಕೆಗಳಲ್ಲಿ, ಟಿ.ವಿ.ಯಲ್ಲಿ ನೋಡಿದಾಗ, ಆ ಆಕ್ರಂದನದ ಗೋಳಿಗೆ ನಮಗೆ ಸಂಕಟವಾಗುತ್ತದೆ ನಾವು ಯಾವುದೇ ಶಬ್ದಗಳಲ್ಲಿ ಅನುಕಂಪದ ಮಾತುಗಳನ್ನು ಆಡುವುದಕ್ಕೆ ಆಗುವುದಿಲ್ಲ. ಇವರೆಲ್ಲರ ಆತ್ಮಕ್ಕೆ ಭಗವಂತನು ಶಾಂತಿಯನ್ನು ನೀಡಲಿ, ಎಂದು ಹೇಳುತ್ತಾ, ತಾವು ಇಂದು ಸಭೆಯಲ್ಲಿ ತಂದಿರುವಂತಹ ಸಂತಾಪ ಸೂಚನೆಗೆ ನಾನು ಧ್ವನಿಗೂಡಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಇಬ್ಬರು ವಯೋವೃದ್ಧ ರಾಜಕಾರಣಿಗಳು, ನಮ್ಮನ್ನು ಮತ್ತು ನಮ್ಮ ರಾಜ್ಯವನ್ನು ಬಿಟ್ಟು ಆಗಲಿದ್ದಾರೆ. ಇವರು ಒಬ್ಬೊಬ್ಬರು ಒಂದೊಂದು ಕ್ಷೇತ್ರಗಳಲ್ಲಿ ನಿಸ್ಸೀಮರಾಗಿದ್ದವರು ಒಬ್ಬ ಮಹನೀಯರು ದಲಿತ ಸಮಾಜದಿಂದ ಬಂದು, ಆ ಸಮಾಜದ ರೈತರಿಗೆ, ಹಳ್ಳಿಯ ಜನರಿಗೆ, ನಾಯಕತ್ವವನ್ನು ಒದಗಿಸಿಕೊಡುವುದರ ಜೊತೆಗೆ, ರಾಜಕೀಯವಾಗಿಯೂ ತಮ್ಮ ಸ್ಥಿತಿಯನ್ನು ಕೊನೆಯ ಉಸಿರು ಇರುವವರೆಗೂ ಕಾಪಾಡಿಕೊಂಡಂಥವರು. ಅವರು ಪಾರ್ಲಿಮೆಂಟ್‌ಗೆ ಸಂಪ್ರದಾಯದಂತೆ ಪ್ರಮಾಣವಚನವನ್ನು ಸ್ವೀಕಾರ ಮಾಡಲು ಬಂದಾಗ ನಾನು ನೋಡುತ್ತಿದ್ದೆ. ಆಗ ನಾನು ಇವರು ಬಹಳ ದಿವಸ ಬದುಕುವುದು ಕಷ್ಟ; ಇವರು ಬಹಳ ದಿವಸ ಸದಸ್ಯರಾಗಿ ಮುಂದುವರೆಯುವುದು ಕಷ್ಟವೆಂದು ಅಂದುಕೊಂಡಿದ್ದೆ. ನಮ್ಮ ಸಂಸತ್ ಸದಸ್ಯರು ಆಸ್ಪತ್ರೆಯಿಂದ ಬಂದು, ಪ್ರಮಾಣ ವಚನವನ್ನು ಸ್ವೀಕರಿಸಿ ಮತ್ತೆ ಆಸ್ಪತ್ರೆಗೆ ಹೋದರು. ಅಂದಾಗ ಇವರಿಗೆ ಸಾವು ಹತ್ತಿರ ಬಂದಿದೆಯೋ ಏನೋ ಎಂದು ಅನ್ನಿಸಿತು. ಈ ರಾಜ್ಯದಲ್ಲಿ ಸ್ವಾತಂತ್ರ್ಯ ಪೂರ್ವ ಭಾರತಕ್ಕೂ ಮತ್ತು ಈಗಿನ ತಲೆಮಾರಿಗೂ ಇರುವಂತಹ ಕೊಂಡಿಗಳು ಬಹಳ ಕಡಿಮೆ ಇವೆ. ಅಂಥಾದ್ದರಲ್ಲಿ ಒಂದು ಕೊಂಡಿ ಕಳಚಿಕೊಂಡು ಉತ್ತರ ಕರ್ನಾಟಕದ ಜನರಿಗೆ, ಅದರಲ್ಲೂ ದಲಿತ ಸಮಾಜದ ಜನರಿಗೆ ನಾಯಕತ್ವದಲ್ಲಿ

ಕೊರತೆಯಾಗಿದೆ. ಈ ಕೊರತೆಯನ್ನು ತುಂಬುವಂತಹ ಶಕ್ತಿಯನ್ನು ಈ ರಾಜ್ಯದ ಜನತೆಗೆ ಆ ಭಗವಂತನು ಕೊಡಲಿ ಎಂದು ಆಶಿಸುತ್ತೇನೆ. ಇನ್ನು ಶ್ರೀ ವೆಂಕಟಗಿರಿಗೌಡರು, ಇವರ ಬಗ್ಗೆ ನಾನು ಬಹಳ ಮಾತನಾಡುವಂತಹ ಅಗತ್ಯವಿಲ್ಲವೆಂದು ತಿಳಿದುಕೊಂಡಿದ್ದೇನೆ ಏಕೆಂದರೆ, ಸಾಮಾನ್ಯವಾಗಿ ನಾಗರೀಕ ಪ್ರಪಂಚದ ಬಗ್ಗೆ ಸ್ವಲ್ಪ ಜ್ಞಾನ ಇದ್ದರೆ ಮಾನ್ಯ ವೆಂಕಟಗಿರಿಗೌಡರ ಬಗ್ಗೆ ಗೊತ್ತೇ ಇರುತ್ತದೆ ಒಂದು ಸಲ ಅವರು ಪುಸ್ತಕಗಳನ್ನು ಬರೆದಂತಹ ಸಂದರ್ಭದಲ್ಲಿ, ಆ ಪುಸ್ತಕದ ಬಗ್ಗೆ ಸುಂಟರಗಾಳಿಯನ್ನು ರಾಜ್ಯದಲಲಿ ಉಂಟು ಮಾಡಿತ್ತು. ಆಗ ನಾನು ಅವರ ಜೊತೆಯಲ್ಲಿ ಮಾತನಾಡುವಂತಹ ಅವಕಾಶವನ್ನು ನಾನು ತೆಗೆದುಕೊಂಡಿದ್ದೆ. ಆಗ ಸ್ವಲ್ಪವೂ ವಿಚಲಿತವಾಗಲಿಲ್ಲ ಬೇಕಾದಷ್ಟು ಪ್ರತಿರೋಧವಿದ್ದಾಗ ಕೂಡ ನಾನು ಮಾಡಿದ್ದೇ ಸರಿ ಎಂಬ ಧೋರಣೆಯನ್ನು ಇಟ್ಟುಕೊಂಡು ಆ ವಯಸ್ಸಿನಲ್ಲಿ ಅಷ್ಟೊಂದು ಹಠ ಮಾಡುವಂತಹ ರಾಜಕೀಯ ಶಕ್ತಿಯನ್ನು ನಾವು ಕಾಣುವುದಿಲ್ಲವೆನೋ ಎಂದು ನಾವು ಅಂದುಕೊಳ್ಳಬೇಕಾಗುತ್ತದೆ. ಅವರು ಮನಸ್ಸು ಮಾಡಿದ್ದರೆ ಡಾ: ನಂಜುಂಡಪ್ಪನವರಾದ ನಂತರ, ಅಥವಾ ಡಾ: ನಂಜುಂಡಪ್ಪನವರಿಗೆ ಸರಿಯಾಗಿ ಈ ದೇಶದ ಅರ್ಥಶಾಸ್ತ್ರಜ್ಞರಾಗಿರಬಹುದಾಗಿತ್ತು. ಆ ರೀತಿ ಅವರು ಇದ್ದರು. ಅವರು ರಾಜಕಾರಣಕ್ಕೆ ಬಂದು ಸ್ವಲ್ಪ ಆ ಕಡೆ ಈ ಕಡೆಯಾಗಿದ್ದರಿಂದ, ಮಾನ್ಯ ವೆಂಕಟಗಿರಿಗೌಡರ ಬಗ್ಗೆ ನಾವುಗಳು ಮಾತನಾಡುವಂತಹ ಸ್ಥಿತಿಯನ್ನು ನಿರ್ಮಾಣ ಮಾಡಿಕೊಂಡಿದ್ದರು. ಅವರಿಗೆ ಹೋರಾಟ ಮಾಡುವಂತಹ ಶಕ್ತಿ ಅರ್ಥಶಾಸ್ತ್ರದ ಕ್ಷತ್ರದಲ್ಲಿ, ಗ್ರಾಮೀಣ ಕ್ಷೇತ್ರದಲ್ಲಿ, ಶಿಕ್ಷಣ ಕ್ಷೇತ್ರದಲ್ಲಿ, ಏನು ಇತ್ತು. ರಾಜಕೀಯ ವ್ಯವಸ್ಥೆಯಲ್ಲಿ ಕೂಡ ಅವರು ಎಷ್ಟೇ ದೊಡ್ಡವರು ಇರಲಿ, ನಾನು ಎದುರಿಗೆ ಹೇಳುತ್ತೇನೆ, ನಾನು ಬರೆದು ಪ್ರತಿರೋಧವನ್ನು ವ್ಯಕ್ತಪಡಿಸುತ್ತೇನೆಂಬ ಶಕ್ತಿಯನ್ನು ಏನು ಪಡೆದುಕೊಂಡಿದ್ದರು, ಏನು ವಿದ್ವತ್ತನ್ನು ಸಂಪಾದನೆ ಮಾಡಿಕೊಂಡಿದ್ದರು ಆದು ಮುಂದಿನ ತಲೆಮಾರಿಗೆ ಮಾರ್ಗದರ್ಶನವಾಗಲಿ, ಅಂತಹ ಹೋರಾಟಗಾರರ ಪರಂಪರೆ ಕನ್ನಡ ನಾಡಿನಲ್ಲಿ ಬೆಳೆದು ಬರಲಿ ಎಂದು ಆಶಿಸಿ, ಅವರಿಗೆ ಮತ್ತು ಅವರ ಮನೆಯವರಿಗೆ ಭಗವಂತ ನಷ್ಟವನ್ನು ತುಂಬುವಂತಹ ಶಕ್ತಿಯನ್ನು ಉಂಟು ಮಾಡಲಿ ಎಂದು ಆಶಿಸುತ್ತೇನೆ. ಸನ್ಮಾನ್ಯ ಸಭಾ ನಾಯಕರು ತಮಿಳುನಾಡಿನ ಕುಂಭಕೋಣಂ ಬಗ್ಗೆ ಏನು ಪ್ರಸ್ತಾಪ ಮಾಡಿದರು, ಆ ದಿವಸ ನಾವು ಟಿ.ವಿ.ಯಲ್ಲಿ ನೋಡಿದರೆ ಇಂತಹ ದುರಂತಗಳನ್ನು ನೋಡಬಾರದೇನೋ ಅನ್ನಿಸಿತು. ಅವರು ಸಹ ಇದನ್ನು ನೋಡಬೇಕಾದರೆ, ಸ್ವಲ್ಪ ಶಕ್ತಿ ಇರುವವರು ನೋಡಿ, ದುರ್ಬಲರಾಗಿರುವವರು ನೋಡಬೇಡಿ ಎಂದು ನ್ಯೂಸ್‌ನಲ್ಲಿ ಹೇಳಿದರು. ನಾನು ನ್ಯೂಸ್‌ನಲ್ಲಿ ಏಕೆ ಹೀಗೆ ಹೇಳುತ್ತಿದ್ದಾರೆಂದು ನೋಡಿದರೆ, ತಕ್ಷಣ ಇದು ಎಂತಹ ದುಃಸ್ಥಿತಿಯಲ್ಲಿದೆ ಎಂದು ನೋಡಿದರೆ ಇಟ್ಟಿಗೆಯನ್ನು ಸುಡುವುದಕ್ಕೆ ಎಂದು ನಾವು ಕಟ್ಟಿಗೆಯನ್ನು ಹೇಗೆ ಇಡುತ್ತೇವೆಯೋ, ಆ ರೀತಿಯಲ್ಲಿ ಮಕ್ಕಳ ಶರೀರಗಳು ಬಿದ್ದಿದ್ದವು. ಅಂತಹ ಒಂದು ಕೆಟ್ಟ ಸನ್ನಿವೇಶ, ಹೃದಯ ವಿದ್ರಾವಕ ಸನ್ನಿವೇಶವನ್ನು ನಾವು ನೋಡಿದರೆ, ತಲೆ ತಗ್ಗಿಸಬೇಕಾಗುತ್ತದೆ. ಇವತ್ತು ನಾವು ಆಡಳಿತ ಏನು ಮಾಡುತ್ತೇವೆ, ಇವತ್ತು ಈ ರಾಜ್ಯಕ್ಕೆ, ರಾಷ್ಟ್ರಕ್ಕೆ ಒಂದು ದಿಕ್ಕನ್ನು ಸೂಚಿಸುತ್ತೇವೆಂಬ ಜನರು ಇದ್ದೇವೆ, ಇಂತಹ ಕಾಲದಲ್ಲೂ ಮಕ್ಕಳು ಬೆಂಕಿಯಲ್ಲಿ ಬಿದ್ದು ಸಾಯುವಂತಹ ಸ್ಥಿತಿ ಇದೆಯೆಂದರೆ, ನಿಜವಾಗಿಯೂ ನಾವು ತಲೆ ತಗ್ಗಿಸಬೇಕಾದಂತಹ ಕ್ರಿಯೆ. ಇದು ಯಾವುದೇ ರಾಜ್ಯದಲ್ಲಾಗಲಿ, ಮಕ್ಕಳು ಭಗವಂತನಿಗೆ ಸಮಾನ, ಏನೂ ತಿಳಿಯದ ಹಸುಗೂಸುಗಳು ಅವರು, ಆ ಮಕ್ಕಳು ಏನು

ಆಸುನೀಗಿದ್ದಾರೆ ಅವರ ತಂದೆ–ತಾಯಿಗಳಿಗೆ, ಆ ದೇವರು ಇವರನ್ನು ಕಳೆದುಕೊಂಡಿರುವಂಥಾದಕ್ಕೆ ಶಕ್ತಿಯನ್ನು ಕೊಡಲಿ ಎಂದು ಹೇಳುತ್ತಾ, ನಾನು ನನ್ನ ಪರವಾಗಿ ಮತ್ತು ನನ್ನ ಪಕ್ಷದ ಪರವಾಗಿ ಸಂತಾಪವನ್ನು ವ್ಯಕ್ತಪಡಿಸಿ, ತಮಗೆ ವಂದಿಸಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಸನ್ಮಾನ್ಯ ಅಧ್ಯಕ್ಷರೇ, ತಾವು ಇಂದು ಸಭೆಯಲ್ಲಿ ತಂದಿರುವಂತಹ ಸಂತಾಪ ಸೂಚನೆಯ ನಿರ್ಣಯವನ್ನು ನಾನು ಅನುಮೋದಿಸುತ್ತೇನೆ. ದಿವಂಗತ ಶ್ರೀ ರಾಮಚಂದ್ರ ವೀರಪ್ಪನವರದ್ದು ಒಂದು ದೊಡ್ಡ ಚರಿತ್ರೆಯಾಗಿದೆ ಇವರು 7 ಬಾರಿ ಲೋಕಸಭೆಯ ಸದಸ್ಯರಾಗಿ ಸೇವೆ ಮಾಡಿರುವಂಥಾದ್ದು, ಮತ್ತು ಅವರ ಅನೇಕ ಚಿತ್ರಗಳನ್ನು ನಾವು ನೋಡಿದೆವು. ಇವರು ಪಂಡಿತ್ ಜವಹರ್‌ಲಾಲ್ ನೆಹರೂರವರ ಜೊತೆಯಲ್ಲಿ ಇದ್ದಾರೆ, ಶ್ರೀ ರಾಜೇಂದ್ರ ಪ್ರಸಾದ್‌ರವರ ಜೊತೆಯಲ್ಲಿದ್ದಾರೆ. ಇವರು ಅನೇಕ ವರ್ಷಗಳ ಕಾಲ ಅಂದರೆ ಸುಮಾರು ಆರೂವರೆ ದಶಕಗಳ ಕಾಲ, ಈ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಸೇವೆ ಮಾಡಿದಂಥವರು. ಬಹುಶಃ ಅವರು ಈ ಕರ್ನಾಟಕ ರಾಜ್ಯದಲ್ಲಿ ಅತ್ಯಂತ ಹಿರಿಯರು ಎಂದು ನನಗೆ ಅನಿಸುತ್ತದೆ; ಮತ್ತೆ ಅವರ ಸರಳ ಜೀವನದ ಬಗ್ಗೆ ಚಿತ್ರಗಳನ್ನು ನೋಡಿದ್ದೇವೆ. ಅಂತಹ ಮಹಾನ್ ವ್ಯಕ್ತಿಯನ್ನು ನಾವು ಕಳೆದುಕೊಂಡಿರುವಂಥಾದ್ದು. ನಮ್ಮ ರಾಜ್ಯಕ್ಕೆ ಅತ್ಯಂತ ನೋವಿನ ಸಂಗತಿಯಾಗಿದೆ. ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರದಲ್ಲಿ ಕಳಕಳಿಯ ಮನವಿಯನ್ನು ಮಾಡಿಕೊಳ್ಳುವುದೇನೆಂದರೆ, ಬೀದರ್ ಜಿಲ್ಲೆಯ ಕುಮಕಾ ಪಟ್ಟಣದಲ್ಲಿ ಶ್ರೀ ರಾಮಚಂದ್ರ ವೀರಪ್ಪನವರ ಒಂದು ಪ್ರತಿಮೆ ಸ್ಥಾಪನೆಯಾಗಬೇಕು. ಇವರು ಬಹುಮುಖ ವ್ಯಕ್ತಿತ್ವವಿದ್ದಂತಹ ವ್ಯಕ್ತಿಯಾಗಿದ್ದಾರೆ. ಇಲ್ಲಿ ಯಾವುದೇ ಪಕ್ಷದಿಂದ ಗೆದ್ದಿರಲಿ, ಯಾವುದೇ ಪಕ್ಷದಲ್ಲಿ ಇರಲಿ, ಅಂತಹ ಒಬ್ಬ ವ್ಯಕ್ತಿ, ನಮ್ಮ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಅಂತಹ ಒಂದು ವ್ಯಕ್ತಿತ್ವವನ್ನು ಹೊಂದಿ ಬಹಳ ಎತ್ತರಕ್ಕೆ ಬೆಳೆದಂಥವರು. ಸಾಮಾನ್ಯ ವರ್ಗದಿಂದ ಬಂದಂತಹ ವ್ಯಕ್ತಿಯು, ಇಷ್ಟು ದೊಡ್ಡ ಪ್ರಮಾಣದಲ್ಲಿ ಬೆಳೆದಂಥವರನ್ನು, ನಾವು ನೆನಪಿಗಾಗಿ ಕೇವಲ ಸಂತಾಪ ಸೂಚನೆಯನ್ನು ವ್ಯಕ್ತಪಡಿಸುವ ಬದಲು, ಇದರಲ್ಲಿ ಸರ್ಕಾರವೂ ಒಂದು ತೀರ್ಮಾನಕ್ಕೆ ಬರಲಿ ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕಳಕಳಿಯ ಒತ್ತಾಯ ಮಾಡುವುದೇನೆಂದರೆ, ಅವರ ಪ್ರತಿಮೆಯನ್ನು ಸ್ಥಾಪಿಸುವ ಬಗ್ಗೆ ತೀರ್ಮಾಣ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಅವರ ಪ್ರತಿಮೆಯನ್ನು ಸ್ಥಾಪನೆ ಮಾಡುವುದರಲ್ಲಿ ಪ್ರಾಮಾಣಿಕವಾದಂತಹ ಪ್ರಯತ್ನವಾಗಬೇಕು. ಇಂತಹ ಎತ್ತರದಲ್ಲಿದ್ದಂತಹ ವ್ಯಕ್ತಿ, ಇಷ್ಟು ಸೇವೆಯನ್ನು ಮಾಡಿರುವಂತಹ ವ್ಯಕ್ತಿಯನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ, ಅವರ ಸೇವೆ, ಸ್ಮರಣೆ ನಿರಂತರವಾಗಿ ಶತಶತಮಾನಗಳಲ್ಲೂ ಉಳಿಯಬೇಕೆಂದರೆ, ಒಂದು ಪರಿಶುದ್ಧವಾದಂತಹ, ಪ್ರಾಮಾಣಿಕವಾದಂತಹ ಪ್ರಯತ್ನ ಆಗಬೇಕಾಗಿದೆ. ಆ ದೃಷ್ಟಿಯಿಂದ, ಮಾನ್ಯ ರಾಮಚಂದ್ರ ವೀರಪ್ಪನವರ ಪ್ರತಿಮೆ ಮಾಡುವಂತಹ ಅವಶ್ಯಕತೆ ಇದೆ, ಅದನ್ನು ಮಾಡಬೇಕಾಗಿದೆ. ಇನ್ನು ಶ್ರೀ ವೆಂಕಟಗಿರಿಗೌಡರ ಬಗ್ಗೆ ಹೇಳುವುದಾದರೆ, ಅವರದ್ದು ವರ್ಣರಂಜಿತವಾದಂತಹ ವ್ಯಕ್ತಿತ್ವ ಅವರು ಅಪಾರವಾದ ಸೇವೆ ಮಾಡಿದಂಥವರು. ಅವರ ಕೊನೆಯ ಉಸಿರು ಇರುವವರೆಗೂ ಯುವಕರ ಹಾಗೆ ಓಡಾಡಿದರು, ಅವರು ಕೊನೆಯ ಗಳಿಗೆಯಲ್ಲಿ ಜಾರಿ ಬಿದ್ದು, ನೋವಾಗಿ ಆಸು ನೀಗಿದ್ದಾರೆ. ಇವತ್ತು ಅಂತಹ ಒಬ್ಬ ಮಹಾನ್ ವ್ಯಕ್ತಿಯನ್ನು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೂ ಶಾಂತಿ ದೊರಯಲೆಂದು ಪ್ರಾರ್ಥನೆ ಮಾಡುತ್ತೇನೆ.

11.40 ಎ.ಎಂ

ಇದರ ಜೊತೆಗೆ, ಕುಂಭಕೋಣಂನಲ್ಲಿ ನಡೆದಿರತಕ್ಕಂಥ ಘಟನೆಯನ್ನು ವರ್ಣನೆ ಮಾಡಲು ನನಗಂತೂ ಯಾವ ಪದಗಳೂ ಸಾಲದು. ಇದೇ ರೀತಿಯ ಘಟನೆಯನ್ನು ನಾನು ಬಹಳ ಹಿಂದೆ ನೋಡಿದ್ದೆ, ಪ್ರೀಮಿಯರ್ ಸ್ಟುಡಿಯೋದಲ್ಲಿ "ಟಿಪ್ಪುವಿನ ಖಡ್ಗ"ದ ಚಿತ್ರೀಕರಣ ನಡೆಯುವಾಗ ಆಗ್ನಿ ಅನಾಹುತದಿಂದ ಇದೇ ರೀತಿ ಸುಮಾರು 20–30 ಜನ ಸುಟ್ಟು ಕರಕಲಾಗಿ ಬೆಂದಿದ್ದ ದೃಶ್ಯದ ನಂತರ ಮತ್ತೆ ನಾವು ಇಂಥ ದೃಶ್ಯವನ್ನು ಪತ್ರಿಕೆಗಳಲ್ಲಿ ನೋಡಿದೆವು. ಇಂಥ ಒಂದು ಪರಿಸ್ಥಿತಿಯ ಬಗ್ಗೆ ನಾವು ಆರಿವು ಮಾಡಿಕೊಳ್ಳಬೇಕು. ಕರ್ನಾಟಕದಲ್ಲೂ ಸಹ, ಮಕ್ಕಳು ಓದುತ್ತಿರುವಂಥ ಇಂಥ ಶಾಲೆಗಳು ಅನೇಕ ಇವೆ. ಅವು ಸರ್ಕಾರೀ ಶಾಲೆಗಳಿರಲಿ, ಖಾಸಗಿ ಶಾಲೆಗಳಿರಲಿ, ಯಾವುದೇ ಶಾಲೆಗಳಿರಲಿ, ಆ ಶಾಲೆಗಳ ಭದ್ರತೆಯ ಬಗ್ಗೆ ಸುಭದ್ರವಾಗಿ ನೋಡಿಕೊಳ್ಳಬೇಕು. ಸರ್ಕಾರವೇ ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕು. ನಮ್ಮ ಶಾಳೆಗಳು ಯಾವ ರೀತಿ ಇರಬೇಕು, ಬೆಂಕಿ ಬೀಳದ ರೀತಿ, ನೀರು ಸೋರದ ರೀತಿ, ಸಿಡಿಲು ಬಡಿಯದ ರೀತಿ, ಹೀಗೆ ಎಲ್ಲಾ ರೀತಿಯ ವ್ಯವಸ್ಥಿತವಾದ ಶಾಲೆಗಳನ್ನು ಮಾಡುವುದಕ್ಕೆ ಈ ಘಟನೆ ಒಂದು ದಾರಿದೀಪವಾಗಿದೆ. ಆದ್ದರಿಂದ, ನಮ್ಮ ಸರ್ಕಾರ ಈ ಕೆಲಸವನ್ನು ಮಾಡಬೇಕು ಎಂದು ಹೇಳುತ್ತೇನೆ. ಇವರೆಲ್ಲರ ಆತ್ಮಕ್ಕೆ ಶಾಂತಿಯನ್ನು ಕೋರಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಸನ್ಮಾನ್ಯ ಅಧ್ಯಕ್ಷರೇ, ತಾವು ಮಂಡಿಸಿರತಕ್ಕಂಥ ಸಂತಾಪ ಸೂಚನಾ ನಿರ್ಣಯಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತೇನೆ. ಲೋಕ ಸಭಾ ಸದಸ್ಯರು, ಸ್ವಾತಂತ್ರ್ಯ ಹೋರಾಟಗಾರರು ಮತ್ತು ಹಿರಿಯರಾದಂಥ ಶ್ರೀ ರಾಮಚಂದ್ರಪ್ಪ ವೀರಪ್ಪನವರಿಗೆ ಈ ಸಭೆ ಶ್ರದ್ಧಾಂಜಲಿ ಅರ್ಪಿಸತಕ್ಕಂಥಾದ್ದು ಬಹಳ ಮುಖ್ಯವಾದಂಥ ವಿಚಾರ ಮತ್ತು ಅದು ಎರಡು ಕಾರಣಗಳಿಗಾಗಿ ಈ ಸದನಕ್ಕೆ ಗೌರವ ತರತಕ್ಕಂಥ ವಿಚಾರ. ಮೊದಲನೆಯದಾಗಿ, ಅವರು ತುಳಿತಕ್ಕೊಳಗಾದ ಜನಾಂಗದಿಂದ ಬಂದು ಇವತ್ತಿನ ಪರಿಸ್ಥಿತಿಯಲ್ಲಿ ಸತತವಾಗಿ ಏಳು ಬಾರಿ ಲೋಕಸಭೆಗೆ ಆಯ್ಕೆಯಾಗುವುದೆಂದರೆ ಅದು ಅಷ್ಟು ಸುಲಭವಾದಂಥ ಕೆಲಸವಲ್ಲ. ಅವರು ಸಾರ್ವಜನಿಕ ಜೀವನದಲ್ಲಿ ಸುಮಾರು 60 ವರ್ಷಗಳ ಕಾಲ ಸತತವಾಗಿ ದುಡಿದರು. ಹಿಂದೆ ಆ ವಿಭಾಗದಲ್ಲಿರತಕ್ಕಂಥ ಜನರಿಗಿದ್ದ ಪರಿಸ್ಥಿತಿಗೂ, ಈಗಿರತಕ್ಕಂಥ ಪರಿಸ್ಥಿತಿಗೂ ಬಹಳ ವ್ಯತ್ಯಾಸವಿದೆ. ಇಂಥ ಬದಲಾದಂಥ ಪರಿಸ್ಥಿತಿಯಲ್ಲೂ ಕೂಡ ಅವರು ಏಳು ಬಾರಿ ಲೋಕಸಭೆಗೆ ಆಯ್ಕೆಯಾಗಿರುವಂಥಾದ್ದು ಸಾಮಾನ್ಯ ವಿಚಾರವಲ್ಲ. ಹಾಗಾಗಿ, ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿರತಕ್ಕಂಥ ವಿಚಾರವನ್ನು ನಾನು ಅನುಮೋದನೆ ಮಾಡುತ್ತಾ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ ಮತ್ತು ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತಿದ್ದೇನೆ, ಶ್ರೀ ರಾಮಚಂದ್ರಪ್ಪ ವೀರಪ್ಪನವರ ಪ್ರತಿಮೆಯನ್ನು ಬೀದರ್ ನಗರದಲ್ಲೇ ಸ್ಥಾಪನೆ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತಾ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇನೆ;

ಇನ್ನೊಬ್ಬ ಪ್ರಮುಖರು, ಪ್ರೊಫೆಸರ್ ವೆಂಕಟಗಿರಿಗೌಡರು. ವೆಂಕಟಗಿರಿಗೌಡರ ಬಗ್ಗೆ ಗೊತ್ತಿಲ್ಲದೇ ಇರತಕ್ಕಂಥವರು ನಮ್ಮ ರಾಜ್ಯದಲ್ಲಿ ವಿರಳ. ಅವರೊಬ್ಬ ಜಗತ್ಪ್ರಸಿದ್ಧ ಅರ್ಥಶಾಸ್ತ್ರಜ್ಞರು. ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಅವರು ಕೀನ್ಸ್‌ನ ವಿದ್ಯಾರ್ಥಿಯಾಗಿ ಅಭ್ಯಾಸ

ಮಾಡುವಾಗಲೇ, ಅವರ ಪ್ರತಿಭೆ ಜಗತ್ತಿಗೆ ಗೊತ್ತಾಗಿತ್ತು. ಏಕೆಂದರೆ, ಜಗತ್ತಿನ ಪ್ರತಿಷ್ಠಿತ ಸಂಸ್ಥೆಯಾದ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಅವರು ಕೀನ್ಸ್‌ನ ಸ್ಟೂಡೆಂಟ್ ಆಗಿದ್ದರು. ಕೀನ್ಸ್‌ಷಿಯನ್ ಅರ್ಥಶಾಸ್ತ್ರದ ಪ್ರಭಾವವನ್ನು ಭಾರತದ ಅರ್ಥ ವ್ಯವಸ್ಥೆಯ ಮೇಲೆ ತರತಕ್ಕಂಥ ಪ್ರಯತ್ನವನ್ನು ದಿವಂಗತ ಇಂದಿರಾ ಗಾಂಧಿಯವರು ಮೊಟ್ಟಮೊದಲ ಬಾರಿಗೆ 1972ರಲ್ಲಿ ಮಾಡಿದಂಥ ಸಂದರ್ಭದಲ್ಲಿ ಡಾ: ವೆಂಕಟಗಿರಿಗೌಡರು ಬಹಳ ಪ್ರಮುಖವಾದ ಪಾತ್ರವನ್ನು ವಹಿಸಿದ್ದರು. ಕೀನ್ಸ್‌ನ ಅರ್ಥಶಾಸ್ತ್ರದ ಮೂಲ ತತ್ವಗಳನ್ನು ಭಾರತದ ಅರ್ಥವ್ಯವಸ್ಥೆಗೆ ಅಳವಡಿಸತಕ್ಕಂಥ ಸಂದರ್ಭದಲ್ಲಿ, ಆ ಬಗ್ಗೆ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ವೆಂಕಟಗಿರಿಗೌಡರು ಬಹಳ ಪ್ರಮುಖ ಪಾತ್ರವನ್ನು ವಹಿಸಿ, ಅವತ್ತಿನ ಭಾರತದ ಅರ್ಥ ವ್ಯವಸ್ಥೆಯನ್ನು ರೂಪಿಸುವುದರಲ್ಲಿ ಬಹಳ ಪ್ರಮುಖವಾದಂಥ ಪಾತ್ರವನ್ನು ವಹಿಸಿದ್ದಾರೆ. ಮತ್ತು ಅರ್ಥಶಾಸ್ತ್ರಕ್ಕೆ ಕೊಡುಗೆಯನ್ನು ಕೊಟ್ಟಿದ್ದಾರೆ. ಅದಕ್ಕಿಂತ ಮುಖ್ಯವಾಗಿ, ಪ್ರೊಫೆಸರ್ ವೆಂಕಟಗಿರಿಗೌಡರು ಅರ್ಥಶಾಸ್ತ್ರಕ್ಕೆ ಕೊಟ್ಟಿರತಕ್ಕಂಥ ಕೊಡುಗೆ ಎಂದರೆ, 1973ರಲ್ಲಿ ಅವರು 'ಡಾಲರ್ ಲ್ಯಾಂಡ್' ಎನ್ನುವ ಒಂದು ಪುಸ್ತಕವನ್ನು ಬರೆದರು. ಈವತ್ತು ನಾವಿವನ್ನು ಮಾತನಾಡುತ್ತಿದ್ದೇವೆ. ಅಮೆರಿಕಾದ ಅಧಿಪತ್ಯ ಮತ್ತು ಮೊಲೀಸ್ ಮ್ಯಾನ್ ಕೆಲಸ ಜಗತ್ತಿನಲ್ಲಿ ಬಹಳ ಹೆಚ್ಚಾಗುತ್ತಿದೆ, ಎಲ್ಲಾ ಬಡದೇಶಗಳ ಮೇಲೆ ಅಮೇರಿಕ ತನ್ನ ಕಪಿಮುಷ್ಟಿಯನ್ನು ಚಾಚುತ್ತಿದೆ ಎಂದು ಅದನ್ನು 1973–74ರಲ್ಲೇ ವೆಂಕಟಗಿರಿಗೌಡರು ತಮ್ಮ 'ಡಾಲರ್ ಲ್ಯಾಂಡ್' ಪುಸ್ತಕದಲ್ಲಿ ಬರೆದಿದ್ದಾರೆ. ಅವತ್ತೇ ಅವರು ಈ ಬಗ್ಗೆ ಇಡೀ ಜಗತ್ತಿಗೇ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಅಮೇರಿಕಾ ರಾಜಕಾರಣ, ಮೂರನೇ ಜಗತ್ತನ್ನು ಹೇಗೆ ಆವರಿಸಿಕೊಂಡು, ಶೋಷಣೆಗೆ ಗುರಿಪಡಿಸುತ್ತದೆ ಎನ್ನುವುದನ್ನು ಬಹಳ ವಿವರವಾಗಿ 'ಡಾಲರ್ ಲ್ಯಾಂಡ್' ಪುಸ್ತಕದಲ್ಲಿ ಹೇಳಿದ್ದಾರೆ. ಅದರಲ್ಲೂ ಪ್ರಮುಖವಾಗಿ, ಭಾರತದ ಅರ್ಥ ವ್ಯವಸ್ಥೆಯ ಮೇಲೆ ಅಮೇರಿಕಾದವರ ಪ್ರಭಾವ ಎಷ್ಟಾಗಬಹುದು ಎನ್ನತಕ್ಕಂಥಾದ್ದನ್ನೂ ಅವರು ವಿವರಿಸಿದ್ದಾರೆ. ಪ್ರೊ. ವೆಂಕಟಗಿರಿಗೌಡರು ಅಂಥ ಒಬ್ಬ ಮಹಾನ್ ಮೇಧಾವಿ. ಅವರಲ್ಲಿ ಹಲವಾರು ಬಲಹೀನತೆಗಳಿದ್ದವು, ನಿಜ. ಈ ಜಗತ್ತಿನಲ್ಲಿ ಬಲಹೀನತೆಗಳು ಇಲ್ಲದೇ ಇರತಕ್ಕಂಥ ವ್ಯಕ್ತಿಗಳು ಯಾರೂ ಇಲ್ಲ. ಆ ಬಲಹೀನತೆಗಳ ಮಧ್ಯೆ ಕೂಡ ಅವರು ಒಬ್ಬ ಪ್ರತಿಭಾವಂತ ಅರ್ಥ ಶಾಸ್ತ್ರಜ್ಞರಾಗಿದ್ದರು ಎನ್ನುವುದನ್ನು ನಾವೆಲ್ಲರೂ ತಿಳಿದುಕೊಳ್ಳಬೇಕಾಗಿದೆ. ಅಂಥ ಒಬ್ಬ ವ್ಯಕ್ತಿ ನಿಧನ ಹೊಂದಿದ್ದಾರೆ. ಅವರಿಗೆ ನಾವು ಸಂತಾಪವನ್ನು ಸೂಚಿಸುತ್ತೇವೆ.

ಇನ್ನು, ಕುಂಭಕೋಣಂನ ಅಗ್ನಿ ಅನಾಹುತದ ಘಟನೆ. ಇದರಿಂದ ಕುಂಭಕೋಣಂಗೆ ಎರಡು ಕರಾಳ ಚರಿತ್ರೆಗಳು ಉಂಟಾದ ಹಾಗೆ ಆಗಿದೆ. ಇಡೀ ನಮ್ಮ ದೇಶದಲ್ಲೇ, ಮೊಟ್ಟಮೊದಲನೇ ಬಾರಿಗೆ 93 ಮಕ್ಕಳನ್ನು ಸುಟ್ಟು ಹಾಕಿದಂಥ ಕರಾಳ ಇತಿಹಾಸ ಈ ಕುಂಭಕೋಣಂಗೆ ಉಂಟಾಗಿದ್ದರೆ, ಅದಕ್ಕಿಂತ ಮೊದಲು 1892ರಲ್ಲಿ ಕುಂಭಕೋಣಂನಲ್ಲಿ ನಡೆದಂಥ ಮತ್ತೊಂದು ಕರಾಳ ಇತಿಹಾಸವಿದೆ. ಕೆಲವರಿಗಾದರೂ ಇದು ಗೊತ್ತಿರಬಹುದು. ಡಾ: ಶ್ರೀನಿವಾಸ ರಾಮಾನುಜಂ, ಜಗತ್ತಿನ the great mathematical genius. ಅವರು ಕುಂಭಕೋಣಂನ ಪ್ರೈಮರಿ ಶಾಲೆಯಲ್ಲಿ ಓದುತ್ತಿದ್ದಾಗ, ಶಾಲೆ ಫೀಸ್ ಕಟ್ಟಿಲ್ಲ ಎಂದು ಅವರನ್ನು ಶಾಲೆಯಿಂದ ಹೊರಗೆ ದಬ್ಬಿದಂಥ ಕರಾಳ ಚರಿತ್ರೆ ಕುಂಭಕೋಣಂನ ಶಾಲೆಗಿದೆ. ಆ ಕರಾಳ ಚರಿತ್ರೆಯ ನಂತರ, ಇನ್ನೊಂದು ಕರಾಳ ಚರಿತ್ರೆ ಕುಂಭಕೋಣಂಗೆ, ಈ ಅಗ್ನಿ ಅನಾಹುತದಿಂದ ಬಂದಿದೆ. ಶ್ರೀನಿವಾಸ ರಾಮಾನುಜಂರವರನ್ನು

ಸ್ಕೂಲ್‌ನಿಂದ ಹೊರಗಡೆ ಹಾಕಿದರು. ಹೊರಗಡೆ ಹೋದ ನಂತರ, ಸ್ಕೂಲ್ ಫೀಸ್ ಕಟ್ಟಲು ಶಕ್ತಿಯಿಲ್ಲ ಎಂದು ಅವರು ಮಂಡಿಯಲ್ಲಿ ಲೆಕ್ಕ ಬರೆದುಕೊಂಡಿದ್ದರು. ಈಗ ಕುಂಭಕೋಣಂನಲ್ಲಿ ನಡೆದಿರತಕ್ಕಂಥ ಕರಾಳ ಚರಿತ್ರೆ ಈ ದೇಶದಲ್ಲಿ ಮತ್ತೆಲ್ಲೂ ಪುನರಾವರ್ತನೆಯಾಗಬಾರದು. ಇದಕ್ಕಾಗಿ ನಾನು ನಮ್ಮ ಕರ್ನಾಟಕ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ, ಹಳ್ಳಿಗಾಡುಗಳಲ್ಲಿರುವ ನಮ್ಮ ಪ್ರೈಮರಿ ಸ್ಕೂಲುಗಳ ದುಸ್ಥಿತಿಯೂ ಹೆಚ್ಚು ಕಡಿಮೆ ಅದೇ ರೀತಿಯಿದೆ. ಕೆಲವು ಕಡೆ ಸ್ಕೂಲಿಗೆ ಬಿಲ್ಡಿಂಗೇ ಇಲ್ಲ, ಕೆಲವು ಕಡೆ ಬಿಲ್ಡಿಂಗ್ ಬಿದ್ದು ಹೋಗತಕ್ಕಂಥ ಸ್ಥಿತಿ ಇದೆ. ಈ ರೀತಿಯ ಪರಿಸ್ಥಿತಿಯನ್ನು ನಮ್ಮ ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ನಾವು ಹೆಚ್ಚಾಗಿ ಕಾಣುತ್ತಿದ್ದೇವೆ. ಕುಂಭಕೋಣಂನಲ್ಲಿ ನಡೆದಿರತಕ್ಕಂಥ ಘಟನೆಯಿಂದ ನಾವು ಪಾಠವನ್ನು ಕಲಿತು, ಇಂಥ ಘಟನೆಗಳು ಮರುಕಳಿಸದಂತೆ ತಾವು ನೋಡಿಕೊಳ್ಳಬೇಕು ಎಂದು ತಮ್ಮಲ್ಲಿ ವಿನಂತಿಸಿ, ಈ ಮೂರು ಘಟನೆಗಳಿಗೆ ನನ್ನ ಸಂತಾಪವನ್ನು ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

+ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಸನ್ಮಾನ್ಯ ಸಭಾಧ್ಯಕ್ಷರೇ, ನಮ್ಮ ರಾಜ್ಯದ ಮತ್ತು ರಾಷ್ಟ್ರದ ಗಣ್ಯವ್ಯಕ್ತಿಗಳಲ್ಲಿ ಒಬ್ಬರಾಗಿರತಕ್ಕಂಥ ಮಾನ್ಯ ರಾಮಚಂದ್ರಪ್ಪ ವೀರಪ್ಪನವರು ಮತ್ತು ಪ್ರೊಫೆಸರ್ ವೆಂಕಟಗಿರಿಗೌಡರ ನಿಧನದ ತರುವಾಯ ತಾವು ಮಂಡಿಸಿರತಕ್ಕಂಥ ಸಂತಾಪ ಸೂಚನಾ ನಿರ್ಣಯಕ್ಕೆ ಬೆಂಬಲವನ್ನು ಸೂಚಿಸುತ್ತಾ, ನಮ್ಮ ಪಕ್ಷದ ಮತ್ತು ನಮ್ಮ ವತಿಯಿಂದ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ, ತಾವು ಮಂಡಿಸಿರತಕ್ಕಂಥ ನಿರ್ಣಯವನ್ನು ಅನುಮೋದಿಸಿ ಒಂದೆರಡು ಮಾತುಗಳನ್ನು ಹೇಳಲು ಬಯಸುತ್ತೇನೆ. ಶ್ರೀ ರಾಮಚಂದ್ರಪ್ಪ ವೀರಪ್ಪನವರು ನಮ್ಮ ದೇಶದ ಸ್ವಾತಂತ್ರ್ಯ ಹೋರಾಟಗಾರರ ಸಾಲಿಗೆ ಸೇರಿದಂಥ ಒಬ್ಬ ಮಹಾನ್ ನಾಯಕರಾಗಿದ್ದರು. ಸ್ವಾತಂತ್ರ್ಯ ಹೋರಾಟಗಾರರ ಪೀಳಿಗೆಯಲ್ಲಿ ಉಳಿದಿರತಕ್ಕಂಥವರು ಬಹಳ ಕಡಿಮೆ ಜನ. ಅದರಲ್ಲಿ ಕೊನೆಯ ಸಾಲಿನಲ್ಲಿ ಬರುತ್ತಿದ್ದವರು ಶ್ರೀಮಾನ್ ರಾಮಚಂದ್ರಪ್ಪ ವೀರಪ್ಪನವರು. ಅವರಲ್ಲಿದ್ದಂಥ ಪ್ರಾಮಾಣಿಕತೆ ಮತ್ತು ದೇಶಭಕ್ತಿಯನ್ನು ಅವರ ಜೀವನದ ಕೊನೆಯ ಉಸಿರಿರುವವರೆಗೆ ಕಾಪಾಡಿಕೊಂಡು ಬಂದಿದ್ದರು. ಅವರ ಲೋಕಸಭೆಯ ಸದಸ್ಯರಾಗಿದ್ದರು, ಹೈದಾರಾಬಾದಿನಲ್ಲಿ ವಿಧಾನಸಭೆಯ ಸದಸ್ಯರಾಗಿದ್ದರು. 1983ರಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ, ನಾವೆಲ್ಲರೂ ಶಾಸಕರಾಗಿದ್ದಂಥ ಸಂದರ್ಭದಲ್ಲಿ ಅವರು ಈ ಸದನದ ಸದಸ್ಯರಾಗಿದ್ದರು. ಅವರು ಬ್ರಿಟಿಷರ ವಿರುದ್ಧ ಹೋರಾಟವನ್ನು ಮಾಡಿದಂಥ ಸಂದರ್ಭದಲ್ಲಿ, ಬ್ರಿಟಿಷರ ಪರವಾಗಿದ್ದಂಥ ಸೈನಿಕರು ಹೊಡೆದಂಥ ಒಂದು ಗುಂಡು, ಅವರ ಕೊನೆಯ ಉಸಿರಿರುವವರೆಗೆ ಅವರ ದೇಹದಲ್ಲೇ ಇತ್ತು. ಈ ರೀತಿ, ಅವರದೊಂದು ಅಪರೂಪದ ವ್ಯಕ್ತಿತ್ವ ಎಂದು ನಾನು ತಿಳಿದುಕೊಂಡಿದ್ದೇನೆ. ರಜಾಕರ ವಿರುದ್ಧ ಅವರು ಮಾಡಿದಂಥ ಹೋರಾಟ ಬಹಳ ದೊಡ್ಡದು. ಮೊದಲು ಅವರು ಕಾಂಗ್ರೆಸ್ಸಿನಲ್ಲಿದ್ದರು, ನಂತರ ಬಿಜೆಪಿಗೆ ಬಂದರು. ಕಾಂಗ್ರೆಸ್ ಮತ್ತು ಬಿಜೆಪಿಯ ತತ್ವಗಳು ಬಹಳ ಬಹಳ ದೂರ ಇದ್ದಂಥವುಗಳು. ಆದರೆ, ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಬೀದರ್ ಜಿಲ್ಲೆಯಲ್ಲಷ್ಟೇ ಅಲ್ಲ, ವಿಶೇಷವಾಗಿ ಬೀದರ್, ಗುಲ್ಬರ್ಗಾ, ರಾಯಚೂರು ಮತ್ತು ಬಳ್ಳಾರಿಗಳಲ್ಲಿ ಶ್ರೀಮಾನ್ ರಾಮ ಚಂದ್ರಪ್ಪ ವೀರಪ್ಪನವರು ಮನೆಮಾತಾಗಿದ್ದರು. ಪಕ್ಷ, ಜಾತಿ, ಗುಂಪು ಇವುಗಳನ್ನೆಲ್ಲಾ ಬಿಟ್ಟು ಅತ್ಯಂತ ದೊಡ್ಡ ವ್ಯಕ್ತಿತ್ವವನ್ನು ಸಂಪಾದನೆ ಮಾಡಿದ್ದವರು ಎಂದರೆ ಮಾನ್ಯ ರಾಮಚಂದ್ರಪ್ಪ ವೀರಪ್ಪನವರು,

ಬಸವಣ್ಣನವರ ವಿಚಾರಗಳನ್ನು ತಮ್ಮ ವೈಯಕ್ತಿಕವಾದ ಜೀವನದಲ್ಲಿ ಅಳವಡಿಸಿಕೊಂಡಿದ್ದಂಥ ಒಬ್ಬ ಮಹಾನ್ ಪುರುಷರಾಗಿದ್ದರು ಅವರು. ನನಗೆ ತಿಳುವಳಿಕೆ ಇರುವ ಹಾಗೆ, ಅವರಿಗೆ ಒಂದು ಒಳ್ಳೆಯ ಮನೆ ಇದೆಯೋ, ಇಲ್ಲವೋ ಗೊತ್ತಿಲ್ಲ, ಅವರ ಮಕ್ಕಳಿಗೆ ಒಂದು ಮನೆಯನ್ನೂ ಬಿಟ್ಟು ಹೋದ ಹಾಗೆ ಕಾಣುವುದಿಲ್ಲ. ಚುನಾವಣೆಯಲ್ಲೂ ಸಹ ಅವರು, ಚುನಾವಣಾ ಆಯೋಗವು ಹೇಳುವಷ್ಟು ಹಣವನ್ನೂ ಖರ್ಚು ಮಾಡುತ್ತಿರಲಿಲ್ಲ. ಈ ಗೌರವಾನ್ವಿತ ಸದನದ ಸದಸ್ಯರಾಗಿರುವಂಥ ನಮ್ಮೆಲ್ಲರಿಗೂ ಕೂಡ ಆದರ್ಶಪ್ರಾಯವಾಗುವಂಥ ವ್ಯಕ್ತಿತ್ವವನ್ನು ಅವರು ಹೊಂದಿದ್ದರು. ಅವರು ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದಿಂದ ಬಂದವರು ಎನ್ನುವುದನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳ ಬೇಕಾಗುತ್ತದೆ.

ಅಂದರೆ ಈ ವರ್ಗದ ಜನಗಳ ಹೋರಾಟ ಏನಿದೆ, ಅವರ ಪರವಾಗಿ ಒಬ್ಬ ಧೀಮಂತ ವ್ಯಕ್ತಿತ್ವದ ಹೋರಾಟವನ್ನು ಮಾಡಿ ಬೆಳೆಸಿಕೊಂಡಿದ್ದಂಥ ಒಬ್ಬ ಮಹಾಪುರುಷ ಇವತ್ತು ನಮ್ಮನ್ನು ಅಗಲಿ ಹೋಗಿರತಕ್ಕಂಥದ್ದು ನಮ್ಮೆಲ್ಲರಿಗೂ ಸಹಿತ ನಮ್ಮ ಕುಟುಂಬದಲ್ಲಿ ಏನಾದರೂ ದುಃಖ ಆದರೆ ಎಷ್ಟು ದುಃಖ ಆಗುತ್ತದೋ ಅಷ್ಟೊಂದು ದುಃಖ ಇವರು ತೀರಿಕೊಂಡಿದ್ದರಿಂದ ಆಗಿದೆ. ನಿಜವಾಗಿಯೂ ಸಹಿತ ನಮ್ಮನ್ನೆಲ್ಲ ಅವರು ಬಹಳ ಪ್ರೀತಿಯಿಂದ ನೋಡುತ್ತಿದ್ದಂಥ ಒಬ್ಬ ಮಹಾನ್ ಪುರುಷರಾಗಿದ್ದರು. ಅವರ ಆತ್ಮಕ್ಕೆ ಶಾಂತಿ ದೊರಕಲಿ, ಅವರ ಜೀವನದ ಕೊನೆಯ ಆಸೆ ಏನಿತ್ತು ಎಂದರೆ, ಬೀದರ್ ಗುಲ್ಬರ್ಗಾ ಜಿಲ್ಲೆಯನ್ನು ಬಹಳ ಕಡೆಗಾಣಿಸಿ ನೀವು ನೋಡುತ್ತಿದ್ದೀರಾ ಎನ್ನತಕ್ಕಂಥ ಮಾತನ್ನು ಅವರು ಕೊನೆ ಕೊನೆಯಲ್ಲಿ ಹೇಳುತ್ತಿದ್ದರು. ಈಗ ಹೈದರಾಬಾದ್ ಕರ್ನಾಟಕ ಏರಿಯಾದಿಂದಲೇ ನಮ್ಮ ಮುಖ್ಯಮಂತ್ರಿಗಳು ಬಂದಿರುವುದರಿಂದ, ಮಾನ್ಯ ಧರ್ಮಸಿಂಗ್‌ರವರು ಆ ಭಾಗದವರೇ ಆಗಿರುವುದರಿಂದ, ಅವರಿಗೆ ಬಹಳ ಚಿರಪರಿಚಿತವಾಗಿರುವುದರಿಂದ, ಮಾನ್ಯ ವಾಟಾಳ್ ನಾಗರಾಜ್‌ರವರು ಒಳ್ಳೆಯ ಸಲಹೆಯನ್ನು ಏನು ಕೊಟ್ಟಿದ್ದಾರೆ ಅದು ಬೀದರ್‌ನಲ್ಲಲ್ಲ, ಹುಮ್ನಾಬಾದ್‌ನಲ್ಲಿ ಆ ರಾಷ್ಟ್ರೀಯ ಹೆದ್ದಾರಿಯಲ್ಲಿ ಇಂಥ ಒಬ್ಬ ಮಹಾಪುರುಷನ ಪ್ರತಿಮೆಯನ್ನು ಮಾಡತಕ್ಕಂಥದ್ದು ಅಷ್ಟೇ ಅಲ್ಲ, ಅಲ್ಲಿರತಕ್ಕಂಥ ಒಂದು ಸಂಸ್ಥೆಗೆ, ನಮ್ಮ ಪಶುಸಂಗೋಪನೆ ಇಲಾಖೆಯ ಮಂತ್ರಿಗಳಾದ ಮಾನ್ಯ ಮಿರಾಜುದ್ದೀನ್ ಪಟೇಲ್‌ರವರು ಇದ್ದಾರೆ, ಅವರು ಸೇರಿ ಮಾನ್ಯ ಮುಖ್ಯ ಮಂತ್ರಿಗಳು ಅಲ್ಲಿ ಶಾಶ್ವತವಾಗಿ ಶ್ರೀ ರಾಮಚಂದ್ರ ವೀರಪ್ಪನವರ ಹೆಸರಿನಲ್ಲಿ ಒಂದು ಸಂಸ್ಥೆ, ಅಲ್ಲಿ ಪಶುಸಂಗೋಪನಾ ವಿದ್ಯಾಲಯವನ್ನು ಮಾಡುತ್ತಿದ್ದೇವೆ, ಯಾವುದಾದರೂ ಒಂದು ಸಂಸ್ಥೆಗೆ ಶ್ರೀ ರಾಮಚಂದ್ರ ವೀರಪ್ಪನವರ ಹೆಸರನ್ನಿಡುವುದರಿಂದ ಬಹಳ ಒಳ್ಳೆಯದಾಗುತ್ತದೆಂದು ನಾನಾದರೂ ಭಾವಿಸಿಕೊಂಡಿದ್ದೇನೆ. ಅಲ್ಲಿ ಮೊರಾರ್ಜಿ ದೇಸಾಯಿ ಹೆಸರಿನಲ್ಲಿರತಕ್ಕಂಥ ಒಂದು ವಸತಿಗೃಹಕ್ಕಾದರೂ ಅವರ ಹೆಸರನ್ನಿಟ್ಟರೆ ಶಾಶ್ವತವಾಗಿ ಬೀದರ್‌ನಲ್ಲಿ ಗುಲ್ಬರ್ಗಾದಲ್ಲಿ ಏನು ಒಂದು ದಲಿತರ ಚಳುವಳಿ ನಡೆಯುತ್ತದೆ, ಆ ವರ್ಗದ ಜನಗಳಿಗೆ ಒಂದು ಗೌರವವನ್ನು ಕೊಟ್ಟ ಹಾಗೆ ಆಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಎರಡನೆಯದಾಗಿ, ಪ್ರೊ: ವೆಂಕಟಗಿರಿಗೌಡರು, ಇವರು ಬಹಳ ನಿಷ್ಠುರವಾದಿಗಳು. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದ್ದಂಥವರು, ತಮ್ಮ ಮಾರ್ಗದರ್ಶಿಗಳು ಆಗಿದ್ದಂಥವರು. ಪ್ರೊ: ವೆಂಕಟಗಿರಿಗೌಡರು ಒಬ್ಬ ಅರ್ಥಶಾಸ್ತ್ರಜ್ಞರು ಅಷ್ಟೇ ಅಲ್ಲ, ಒಬ್ಬ ಅತ್ಯಂತ ಪ್ರಾಮಾಣಿಕವಾಗಿದ್ದಂಥ, ನಿಷ್ಠುರವಾದಿಯಾಗಿದ್ದಂಥ, ಸಾರ್ವಜನಿಕ ಜೀವನದಲ್ಲಿ ಮಾರ್ಗದರ್ಶನ

ಮಾಡತಕ್ಕಂಥ ಒಬ್ಬ ಮುಖಂಡರಾಗಿದ್ದರು. ಮಾನ್ಯ ಶ್ರೀರಾಮರೆಡ್ಡಿಯವರು ಪ್ರೊ: ವೆಂಕಟಗಿರಿಗೌಡರ ಆರ್ಥಿಕ ಚಿಂತನೆ ಬಗ್ಗೆ ವಿಶ್ಲೇಷಣೆಯನ್ನು ಮಾಡಿದರು. ನಾನು ಸಂಪೂರ್ಣವಾಗಿ ಅದನ್ನು ಒಪ್ಪುತ್ತೇನೆ. ಇವತ್ತು ನಮ್ಮ ದೇಶದ ಪ್ರಗತಿಯನ್ನು ಕಾಣಬೇಕಾದರೆ ಇಂಥ ಆರ್ಥಿಕ ತಜ್ಞರ ಆರ್ಥಿಕ ವಿಚಾರಗಳು ನಮಗೆಲ್ಲರಿಗೂ ಸಹಿತ ಮನವರಿಕೆಯಾಗಬೇಕು. ಅವರು ಬಹಳ ನಿಷ್ಠೂರವಾದಿಗಳಾಗಿದ್ದರು. ತಮ್ಮ ಸ್ನೇಹಿತರನ್ನು, ತಮ್ಮ ಕುಟುಂಬದವರನ್ನು ಕಳೆದುಕೊಂಡರೂ ಪರವಾಗಿಲ್ಲ, ತನಗೆ ಅನಿಸಿದ್ದನ್ನು ತಾನು ಹೇಳಲೇಬೇಕು, ತಮಗೆ ಅನಿಸಿದ್ದನ್ನು ಹೇಳುವುದರ ಜೊತೆಗೆ ನ್ಯಾಯವಾಗಿದ್ದಂಥದ್ದರ ಬಗ್ಗೆ ಹೋರಾಟ ಮಾಡುವಂಥ ಒಂದು ಪ್ರವೃತ್ತಿಯನ್ನು ಪ್ರೊ: ವೆಂಕಟಗಿರಿಗೌಡರು ಬೆಳೆಸಿಕೊಂಡಿದ್ದರು. ಲೋಕಸಭಾ ಸದಸ್ಯರಾಗಿದ್ದು ಅವರು ನಮ್ಮ ಬೆಂಗಳೂರು ಗ್ರಾಮಾಂತರ ಜಿಲ್ಲೆಯವರು. ಚನ್ನಪಟ್ಟಣ ತಾಲ್ಲೂಕಿನವರು ಎಂದು ಹೇಳಿಕೊಳ್ಳಲಿಕ್ಕೆ ನಮಗೆ ಬಹಳ ಹೆಮ್ಮೆಯಾಗುತ್ತದೆ. ಅಂಥ ಒಬ್ಬ ದೊಡ್ಡ ಅರ್ಥಶಾಸ್ತ್ರಜ್ಞರನ್ನು ನಾವು ಕಳೆದುಕೊಂಡಿದ್ದೇವೆ. ಪ್ರಧಾನಿಗಳಾಗಿದ್ದಂಥವರು ಅವರನ್ನು ಕರೆಸಿ ಮಾತನಾಡತಕ್ಕಂಥ ಕಾಲ ಸಹ ಇತ್ತು. ಇವತ್ತು ಆರ್ಥಿಕ ವಿಚಾರಗಳಿಗೆ ಬಹಳ ಮಹತ್ವ ಬಂದಿರತಕ್ಕಂಥದ್ದನ್ನು ನಾವು ಗಮನಿಸಿದ್ದೇವೆ. ಇವತ್ತು ರಾಜಕೀಯ ಆರ್ಥಿಕ ವಿಚಾರವನ್ನು ಬಿಟ್ಟು ಮುಂದೆ ಸರಿಯಲಿಕ್ಕೆ ಆಗುತ್ತಿಲ್ಲ. ಅಂಥ ಸನ್ನಿವೇಶದಲ್ಲಿ ಪ್ರೊ: ವೆಂಕಟಗಿರಿಗೌಡರ ಮಾರ್ಗದರ್ಶನ ಬಹಳ ಅವಶ್ಯಕವಾಗಿತ್ತು. ಅವರು ದೈವಾಧೀನರಾಗಿದ್ದಾರೆ. ಅವರ ಆತ್ಮಕ್ಕೆ ಶಾಂತಿಯನ್ನು ಈ ಸಂದರ್ಭದಲ್ಲಿ ನಾನು ಕೋರಿ, ತಮಿಳುನಾಡಿನಲ್ಲಿ ನಡೆದಿರತಕ್ಕಂಥ ಬೆಂಕಿಯ ದುರಂತದಿಂದ ಸಾವನ್ನಪ್ಪಿರತಕ್ಕಂಥ 90 ಜನ ಹಸುಳೆಗಳೇನಿದ್ದಾರೆ ಇದರಿಂದ ಸರ್ಕಾರಗಳು ಹೆಚ್ಚಾಗಿ ಪಾಠ ಕಲಿಯತಕ್ಕಂಥದ್ದು ಬಹಳ ಹೆಚ್ಚಿಗೆ ಇದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳ ಜೊತೆಗೆ ಸಹಿತ ಇದನ್ನು ನಾನು ಪ್ರಸ್ತಾಪ ಮಾಡಿದ್ದೇನೆ. ಇವತ್ತು ನಮ್ಮ ರಾಜ್ಯದಲ್ಲಿ ಸಹಿತ ಗ್ರಾಮೀಣ ಪ್ರದೇಶದಲ್ಲಿ ಅನೇಕ ಪಾಠಶಾಲೆಗಳು ಇವೆ. ಅಲ್ಲಿ ಈ ಗುಡಿಸಲುಗಳನ್ನು ಹಾಕಿ ಶಾಲೆಗಳನ್ನು ನಡೆಸುತ್ತಿರತಕ್ಕಂಥದ್ದು ನಮ್ಮ ಗಮನಕ್ಕೆ ಬಂದಿದೆ. ಮತ್ತೆ ಅನೇಕ ಕಡೆಗಳಲ್ಲಿ ಬಿಸಿಯೂಟದ ಕಾರ್ಯಕ್ರಮದಿಂದಾಗಿ ಗುಡಿಸಲುಗಳಲ್ಲಿ ಅಡಿಗೆಯನ್ನು ಮಾಡತಕ್ಕಂಥದ್ದು ನಮ್ಮ ಗಮನಕ್ಕೆ ಬಂದಿದೆ. ನಮ್ಮ ಜಿಲ್ಲೆಯ ಮಟ್ಟಿಗೆ "ಇಂಥ ಅನಾಹುತ ಆದೀತು, ದಯವಿಟ್ಟು ಇದನ್ನು ಎಚ್ಚರಿಕೆಯ ಗಂಟೆ ಎಂದು ತೆಗೆದುಕೊಳ್ಳಬೇಕೆಂದು" ನಾನು ಈಗಾಗಲೇ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳ ಜೊತೆಗೂ ಪ್ರಸ್ತಾಪ ಮಾಡಿದ್ದೇನೆ. ಇಡೀ ರಾಜ್ಯದಲ್ಲಿ ಇದು ಒಂದು ಸೂಚನೆಯಾಗಿ ನಾವೆಲ್ಲರೂ ತೆಗೆದುಕೊಳ್ಳಬೇಕಾಗುತ್ತದೆ. ಜಿಲ್ಲಾ ಪಂಚಾಯತಿಯವರು, ತಾಲ್ಲೂಕು ಪಂಚಾಯತಿಯವರು, ಚುನಾಯಿತ ಪ್ರತಿನಿಧಿಗಳು, ಇದರ ಕಡೆಗೆ ಗಮನಕೊಡಲಿಕ್ಕೆ ಇದೊಂದು ಪಾಠ ಎಂದು ತಿಳಿದು, ಪಾಪ ಅಲ್ಲಿ ಹಸುಳೆಗಳು ಯಾರು ತೀರಿಕೊಂಡಿದ್ದಾರೆ ಅವರಿಗೆ ಕಾಂಗ್ರೆಸ್ ಪಾರ್ಟಿಯ ಅಧ್ಯಕ್ಷರು ಮತ್ತು ನಮ್ಮ ಯುನೈಟೆಡ್ ಪ್ರೋಗ್ರೆಸ್ಸೀವ ಅಲಯೆನ್ಸ್‌ನ ಅಧ್ಯಕ್ಷರು ಹೋಗಿ ಅವರಿಗೆ ಸಾಂತ್ವನ ಹೇಳಿ ಒಂದು ಕೋಟಿ ರೂಪಾಯಿಗಳ ಪರಿಹಾರಧನವನ್ನು ಕೊಟ್ಟಿರತಕ್ಕಂಥದ್ದು ಏನಿದೆ, ಅದು ಒಂದು ಸ್ವಾಗತಾರ್ಹ ಕೆಲಸ ಅನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸಿ ತಾವು ಮಂಡಿಸಿರತಕ್ಕಂಥ ಸಂತಾಪ ಸೂಚನೆಗೆ ನಾನು ಸಂಪೂರ್ಣವಾಗಿ ಸಹಮತವನ್ನು ವ್ಯಕ್ತಮಾಡಿ ಇವರೆಲ್ಲರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಹೇಳಿ ನಾನು ನಮ್ಮ ಪಕ್ಷದ ಪರವಾಗಿ ನಮಗೆ ಮಾತನಾಡಲಿಕ್ಕೆ ಸಮಯಾವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

+ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಟಿರಾದ್) : ಮಾನ್ಯ ಅಧ್ಯಕ್ಷರೆ, ತಾವು ತಂದಿರತಕ್ಕಂಥ ಪ್ರಸ್ತಾಪಕ್ಕೆ ಸಹಮತವನ್ನು ನೀಡುತ್ತಾ ಶ್ರೀ ರಾಮಚಂದ್ರ ವೀರಪ್ಪನವರು ಬಹಳ ದೊಡ್ಡ ಮತ್ತು ಸರಳ ವ್ಯಕ್ತಿಯಾಗಿದ್ದರು. ಬಹಳ ದೊಡ್ಡ ಅನುಭವಿಗಳು. ಸತತ 7 ಬಾರಿ ಪಾರ್ಲಿಮೆಂಟ್‌ನ ಸದಸ್ಯರಾಗಿದ್ದರು, ವಿಧಾನಪರಿಷತ್ತಿನ ಸದಸ್ಯರಾಗಿದ್ದರು, ಹಾಗೂ ವಿಧಾನಸಭಾ ಸದಸ್ಯರಾಗಿದ್ದರು. ಚುನಾವಣೆ ಬಂದಾಗ ಯಾವ ಪಾರ್ಟಿಯಿಂದಂತೂ ಅವರು ಆರಿಸಿ ಬರುತ್ತಿರಲಿಲ್ಲ. ಒಂದು ವಿಶೇಷ ಎಂದರೆ ಚುನಾವಣೆಯಲ್ಲಿ ಅವರು ಎಂದೂ ಅವರ ಕ್ಷೇತ್ರದಲ್ಲಿ ಓಡಾಡುತ್ತಿರಲಿಲ್ಲ. ಚುನಾವಣೆಯಿದ್ದರೂ ಅವರು ಮನೆಯಲ್ಲಿ ಹಾಸಿಗೆ ಹಾಸಿಕೊಂಡು ಮಲಗಿಕೊಳ್ಳುತ್ತಿದ್ದರು. ಏಕೆ ಹೀಗೆ ಮಾಡುತ್ತೀರಿ ಎಂದು ಕೇಳಿದರೆ, 'ಬೇಕಾದರೆ ಅವರು ಓಟು ಹಾಕುತ್ತಾರೆ, ಇಲ್ಲದಿದ್ದರೆ ಬಿಡ್ರಿ' ಎಂದು ಹೇಳುತ್ತಿದ್ದರು. ಪಕ್ಷ ಪ್ರಶ್ನೆ ಇರಲಿಲ್ಲ. ಅಂದರೆ ಅವರಿಗೆ ಗೆದ್ದು ಬರುವ ಭರವಸೆ ಹೀಗಿತ್ತು. ಜನರೂ ಸಹ 'ಒಂದು ಓಟು ನಿಮಗೆ ಕೊಡುತ್ತೇವೆ, ಒಂದು ಓಟು ಅವರಿಗೆ ಕೊಡುತ್ತೇವೆ ದಯವಿಟ್ಟು ಕ್ಷಮಿಸಿ' ಎಂದು ಹೇಳುತ್ತಿದ್ದರು. ಏಕಪ್ಪಾ ಎಂದು ಕೇಳಿದರೆ – 'ಅವರಿಂದ ಏನೂ ತೊಂದರೆ ಆಗುವುದಿಲ್ಲ ಅಷ್ಟೇ ಸಾಕು ನಮಗೆ' ಎಂದು ಹೇಳುತ್ತಿದ್ದರು. ಅಂದರೆ ಆ ಭಾವನೆ, ಆ ವ್ಯಕ್ತಿತ್ವವನ್ನು ಶ್ರೀ ರಾಮಚಂದ್ರ ವೀರಪ್ಪನವರು ಉಳಿಸಿಕೊಂಡು ಬಂದಿದ್ದರು. ಬಹಳ ಒಳ್ಳೆಯವರು. ಇದ್ದುದ್ದನ್ನು ಇದ್ದ ಹಾಗೆ ಹೇಳುತ್ತಿದ್ದರು. ಹಿಂದೆಮುಂದೆ ಹೇಳತಕ್ಕಂಥವರು ಅಲ್ಲ. ಒಂದು ಸಾರಿ ನಾನು ಅವರ ಹತ್ತಿರ ಹೋಗಿದ್ದೆ. ಅವರು ಕಾಂಗ್ರೆಸ್ ಪಕ್ಷದಿಂದ ಆರಿಸಿ ಸಂಸತ್ ಸದಸ್ಯರಾಗಿದ್ದರು. ಆವಾಗ ನಾನೂ ಡೆಲ್ಲಿಗೆ ಹೋಗಿದ್ದೆ. ಶ್ರೀ ಕೆ. ಹನುಮಂತಯ್ಯನವರೂ ಸಹ ಇದ್ದರು. ಹನುಮಂತಯ್ಯನವರ ಹತ್ತಿರ ನಮ್ಮನ್ನು ಕರೆದುಕೊಂಡು ಹೋದರು. ಕರೆದುಕೊಂಡು ಹೋಗಿ ಹನುಮಂತಯ್ಯನವರಿಗೆ ಹೇಳಿದರು. 'ಸ್ವಾಮಿ ನಮ್ಮ ಊರಿನಿಂದ ನಾವು ಬಂದಿದ್ದೇವೆ. ಶೇರ್ ಶೇರ್ ಎಂದು ಕರೆಯುತ್ತಿದ್ದರು. ಶೇರ್ ಆಯಾ ಹಮಾರ ಗಾಂವ್ ಸೆ ..... ಇದು ಕಾನೂನಿನಂತೆ ಬಂದಿದ್ದರೆ ನಾನು ಏಕೆ ನಿನ್ನ ಹತ್ತಿರ ಬರುತ್ತಿದ್ದೆ? ಕಾನೂನಿನಂತೆ ಆಗುವುದಿಲ್ಲವೆಂದು ಹೇಳಿ ನಾನು ನಿನ್ನ ಹತ್ತಿರ ಬಂದಿದ್ದೇನೆ, ಆಗುವುದಿಲ್ಲವೆಂದು ನಾನು ಹೇಳಿದೆ, ಆಗುವ ಕೆಲಸ ನೀನೇ ಮಾಡುತ್ತೀಯಾ ಎಂದು ಹೇಳಿದಾಗ, ಏನು ಇಷ್ಟು ನೇರವಾಗಿ ಹೇಳುತ್ತೀರಲ್ಲಾ' ಎಂದು ಕೇಳಿದಾಗ, ನಾನು ಹೀಗೆಯೇ ಹೇಳುವುದು, ಇದು ಮಾಡಬೇಕು, ಅಲ್ಲಿಂದ ಇಲ್ಲಿಗೆ ಬಂದಿದ್ದಾರೆ ಎಂದು ಹೇಳುತ್ತಿದ್ದರು. ಅಂದರೆ ಯಾರ ಹತ್ತಿರವೂ ಸಹ ನೇರವಾಗಿ ಹೋಗುತ್ತಿದ್ದರು. ಈಗ ಮಾನ್ಯ ಸಿಂಧ್ಯಾರವರು ಹೇಳಿದರಲ್ಲಾ ಗೋಲಿ ಇದರ್ ಹೈ; ಹಮ್ ಗೋಲಿ ಖಾಯೆ ಸೋ ಆದ್ಮೀ....' ಈ ಪ್ರಕಾರವಾಗಿ ಬಹಳ ಧೈರ್ಯದಿಂದ ಹೇಳುತ್ತಿದ್ದರು. ಒಳ್ಳೆಯ ವ್ಯಕ್ತಿತ್ವದಿಂದ ಕೂಡಿದ ಸರಳ ವ್ಯಕ್ತಿಯಾಗಿದ್ದರು. ಯಾವ ದುಡ್ಡು ಕಾಸು ಬೇಕಾಗಿರಲಿಲ್ಲ. ಬಹಳ ಒಳ್ಳೆಯವರು ಬಹಳ ಅನುಭವಿಗಳು ಇಷ್ಟು ದಿವಸ ಅವರು ಇದ್ದರು, ನಿಜವಾಗಿಯೂ ಇನ್ನೂ ಇರಬೇಕಾಗಿತ್ತು. ನಮ್ಮ ಬೀದರ್‌ಗಂತೂ ಇವರು ದೈವಾಧೀನರಾಗಿದ್ದರಿಂದ ಬಹಳ ಲುಕ್ಸಾನು ಆಗಿದೆ. ಪಕ್ಷ ಯಾವುದೇ ಇರಲಿ ಬಹಳ ಒಳ್ಳೆಯವರಾಗಿದ್ದರು. ಅಂಥವರು ತೀರಿ ಹೋಗಿದ್ದಕ್ಕೆ ನಿಜವಾಗಿ ನಮ್ಮ ಮನಸ್ಸಿಗೆ ನೋವಾಗಿದೆ. ಅಂಥವರನ್ನು ಕಳೆದುಕೊಂಡಿದ್ದೇವೆ. ಅವರು ಮನೆಯವರಿಗೂ ಮಕ್ಕಳಿಗೂ ದೇವರು ಶಾಂತಿಯನ್ನು ಕೊಡಲಿ, ಇಲ್ಲಿಂದಲೂ ಕೂಡ ಸಂತಾಪ ಸೂಚನೆಯನ್ನು ಅವರ ಮನೆಗೆ ಕಳುಹಿಸಬೇಕೆಂದು ಕೇಳಿಕೊಂಡು, ಅದೇ ಪ್ರಕಾರ

ಪ್ರೊ: ವೆಂಕಟಗಿರಿಗೌಡರೂ ಸಹ ದೊಡ್ಡ ಅರ್ಥಶಾಸ್ತ್ರಜ್ಞರು, ಬಹಳ ಅನುಭವಿಗಳು, ಒಳ್ಳೆಯವರಿದ್ದರು ಅಂಥವರನ್ನೂ ಕೂಡ ನಾವು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೂ ಶಾಂತಿ ಸಿಗಲಿ ಎಂದು ಹೇಳಿ, ಕುಂಭಕೋಣಂನಲ್ಲಿ ಬೆಂಕಿ ಅನಾಹುತದಿಂದ 90 ಹುಡುಗರು ತೀರಿ ಹೋಗಿ ಎಷ್ಟು ಅನಾಹುತವಾಗಿದೆ ಎಂಬುದು ನಮ್ಮ ಕಣ್ಣಮುಂದೆ ಇದೆ. ಮಾನ್ಯ ಸಿಂಧ್ಯಾರವರು ಹೇಳಿದ ಪ್ರಕಾರ ಎಲ್ಲಿ ಹಳೆಯ ಕಟ್ಟಡಗಳಲ್ಲಿ ಗುಡಿಸಲುಗಳಲ್ಲಿ ಶಾಲೆಗಳು ಇವೆ ಅಲ್ಲಿ ಯಾವಾಗಲಾದರೂ ಅನಾಹುತವಾಗುವ ಪರಿಸ್ಥಿತಿ ಬರಬಹುದು, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಸರ್ಕಾರದವರೆಲ್ಲರೂ ಸೇರಿ ಇದರ ಬಗ್ಗೆ ಏನಾದರೊಂದು ವಿಶೇಷವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಒಳ್ಳೆಯ ಕಟ್ಟಡಗಳಲ್ಲಿ ಶಾಲೆಗಳನ್ನು ತೆರೆದು ಮಕ್ಕಳು ವಿದ್ಯಾರ್ಜನೆ ಮಾಡುವುದಕ್ಕೆ ಅನುಕೂಲವಾಗಬೇಕು, ಅಲ್ಲಿ ನಡೆದಂಥ ಘಟನೆ ಒಂದು ಎಚ್ಚರಿಕೆ ಎಂದು ತಿಳಿದುಕೊಂಡು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕಾದದ್ದು ಒಳ್ಳೆಯದು. ಅದರಲ್ಲಿ ಕೂಡ ನಾನು ಭಾಗಿಯಾಗಿ ಸಂತಾಪ ಸೂಚನೆ ವ್ಯಕ್ತಪಡಿಸುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

ಶ್ರೀ ಕಾರಜೋಳ ಗೋವಿಂದ ಮಕಟಪ್ಪ (ಮುಧೋಳ) : ಸನ್ಮಾನ್ಯ ಅಧ್ಯಕ್ಷರೆ, ಶ್ರೀ ರಾಮಚಂದ್ರ ವೀರಪ್ಪನವರು ದಲಿತ ಕುಟುಂಬದಲ್ಲಿ ಹುಟ್ಟಿ ಸಮಾಜದ ಎಲ್ಲಾ ವರ್ಗಗಳ ಪ್ರೀತಿಗೆ ವಿಶ್ವಾಸಕ್ಕೆ ಗೌರವಕ್ಕೆ ಪಾತ್ರರಾಗಿದ್ದಂಥವರು. ಶ್ರೀ ರಾಮಚಂದ್ರ ವೀರಪ್ಪನವರು ಶಾಸಕರಾಗಿದ್ದಂಥ ಸಂದರ್ಭದಲ್ಲಿ 1985ರಲ್ಲಿ ಒಂದು ಇಡೀ ದಿನ ಅವರ ಜೊತೆಯಲ್ಲಿ ಬಿಜಾಪುರದಲ್ಲಿ ಇರುವಂಥ ಪ್ರಸಂಗ ಬಂದಿತ್ತು. ಅವರಲ್ಲಿದ್ದಂಥ ವಿಚಾರಗಳು ಸಮಾಜದ ಕಟ್ಟಕಡೆಯ ಮನುಷ್ಯನ ಬಗ್ಗೆ ಚಿಂತನೆ, ಅವರ ಸರಳ ವ್ಯಕ್ತಿತ್ವವನ್ನು ನೋಡಿ ನಾನು ಬಹಳ ಪ್ರಭಾವಕ್ಕೆ ಒಳಗಾಗಿದ್ದೆ. ಇವರು 1956ರಿಂದಲೂ ಶಾಸಕರಾಗಿದ್ದಂಥವರು. ಒಂದು ಸಾರಿ ವಿಧಾನ ಪರಿಷತ್ತಿಗೆ, ಎರಡು ಬಾರಿ ವಿಧಾನಸಭೆಗೆ 7 ಬಾರಿ ಲೋಕಸಭೆಗೆ ಆಯ್ಕೆಯಾದಂಥ ವ್ಯಕ್ತಿ, ಅವರು ತಮ್ಮ ಬಟ್ಟೆಗಳನ್ನು ಮತ್ತು ಅವರ ಸಾಮಾನುಗಳನ್ನು ಹಾಕಿಕೊಳ್ಳಲಿಕ್ಕೆ ಹಳೆಯ ಕಾಲದ ಒಂದು ಕಬ್ಬಿಣದ ಟ್ರಂಕ್‌ನ್ನು ತಂದಿದ್ದರು. ಅವರ ಹತ್ತಿರ ಉತ್ತಮವಾದಂಥ ಒಂದು ಸೂಟ್‌ಕೇಸ್ ಸಹ ಇರಲಿಲ್ಲ. ಅಂಥ ಒಂದು ಸರಳ ವ್ಯಕ್ತಿತ್ವ, ಅವರು ಊರಿಗೆ ಬಂದಾಗ ತಮ್ಮ ಬಟ್ಟೆಗಳನ್ನು ತಾವೇ ಒಗೆದು ಹಾಕಿಕೊಳ್ಳುತ್ತಿದ್ದರು. ಬಿಜಾಪುರದಲ್ಲಿ ಅವತ್ತು ಅವರು ಸ್ನಾನ ಮಾಡಿದ ಮೇಲೆ ಅವರ ಬಟ್ಟೆಯನ್ನು ಅವರೇ ಒಗೆದು ಹಾಕಿಕೊಂಡರು. ಇದು ಸಮಾಜದಲ್ಲಿರತಕ್ಕಂಥ ಪ್ರತಿಯೊಬ್ಬ ಅಧಿಕಾರಸ್ಥರಿಗೂ ಅವರಂಥ ವಿಚಾರಗಳು ಬಂದರೆ ಬಹಳ ಉತ್ತಮವಾಗುತ್ತದೆ. ಮಾನ್ಯ ರಾಮಚಂದ್ರ ವೀರಪ್ಪನವರ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್ ಹಾಗೂ ಮಾನ್ಯ ಶ್ರೀರಾಮರೆಡ್ಡಿಯವರು ಅವರ ಪ್ರತಿಮೆ ಅನಾವರಣ ಮಾಡಬೇಕೆಂದು ಹೇಳಿದರು. ಇದಕ್ಕೆ ನಾನೂ ಕೂಡ ಸಹಮತವನ್ನು ವ್ಯಕ್ತ ಮಾಡುತ್ತೇನೆ. ಅವರ ಹುಟ್ಟೂರಾದ ಹುಮ್ನಾಬಾದ್‌ನಲ್ಲಿ ಪರಿಶಿಷ್ಟ ಜನಾಂಗದ ಮಕ್ಕಳಿಗಾಗಿ ಒಂದು ವಸತಿ ಶಾಲೆಯನ್ನು ಪ್ರಾರಂಭ ಮಾಡಬೇಕೆಂದು ನಾನು ಸರ್ಕಾರದಲ್ಲಿ ಮನವಿ ಮಾಡುತ್ತೇನೆ. ನಾವು ಕೇವಲ ಅವರ ಪ್ರತಿಮೆಯನ್ನು ಆನಾವರಣ ಮಾಡುವುದರಿಂದ ಹೆಚ್ಚಿನ ಅನುಕೂಲವಾಗುವುದಿಲ್ಲ. ಯಾವ ಉದ್ದೇಶಕ್ಕಾಗಿ ಅವರು ತಮ್ಮ ಇಡೀ ಜೀವನವನ್ನು ಸವೆಸಿದರು, ಅಂಥ ವ್ಯಕ್ತಿಯ ಹೆಸರಿನಲ್ಲಿ ಒಂದು ವಸತಿ ಶಾಲೆ ತೆರೆದರೆ, ಈ ಭೂಮಿಯ ಮೇಲೆ ಮನುಕುಲ ಇರುವವರೆವಿಗೂ ಶಾಶ್ವತವಾಗಿ ಅನುಕೂಲವಾಗುತ್ತದೆ. ಆ ಮೂಲಕ

ಶ್ರೀ ರಾವರಚಂದ್ರ ವೀರಪ್ಪನವರ ಹೆಸರು ಅಜರಾಮರವಾಗಿ ಉಳಿಯಬೇಕೆಂದು ನಾನು ಸರ್ಕಾರಕ್ಕೆ ವಿನಂತಿಸುತ್ತೇನೆ. ಇನ್ನು ಮಾನ್ಯ ರಾಮಚಂದ್ರ ವೀರಪ್ಪನವರ ಸಂತಾಪ ಸೂಚನೆಯ ಜೊತೆಯಲ್ಲೇ ಪ್ರೊ: ವೆಂಕಟಗಿರಿಗೌಡರವರ ಬಗ್ಗೆಯೂ ನಾನು ಎರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಪ್ರೊ: ವೆಂಕಟಗಿರಿಗೌಡರವರು ಈ ವಿಶ್ವದ ಅರ್ಥಶಾಸ್ತ್ರಜ್ಞರಲ್ಲಿ ಅವರೂ ಒಬ್ಬರಾಗಿದ್ದರು. ವಿಶೇಷವಾದ ವ್ಯಕ್ತಿತ್ವವನ್ನು ಹೊಂದಿದಂಥ ಪ್ರೊ: ವೆಂಕಟಗಿರಿಗೌಡರವರ ಅಗಲಿಕೆಯಿಂದ ನಮ್ಮ ರಾಷ್ಟ್ರಕ್ಕೆ ಅಷ್ಟೇ ಅಲ್ಲ, ಇಡೀ ವಿಶ್ವಕ್ಕೆ ತುಂಬಲಾರದ ನಷ್ಟವಾಗಿದೆ. ಪ್ರೊ: ವೆಂಕಟಗಿರಿಗೌಡರವರ ಮತ್ತು ಶ್ರೀ ರಾಮಚಂದ್ರ ವೀರಪ್ಪನವರ ನಿಧನಕ್ಕೆ ನಾನು ಶ್ರದ್ಧಾಂಜಲಿಯನ್ನು ಸಲ್ಲಿಸುತ್ತೇನೆ. ಕುಂಬಕೋಣಂನಲ್ಲಿ ನಡೆದಂತಹ ಬೆಂಕಿಯ ಅನಾಹುತದಿಂದ 90 ಮಕ್ಕಳು ಏನು ಪ್ರಾಣಕಳೆದುಕೊಂಡಿದ್ದಾರೆ. ಅದಕ್ಕೆ ಇಡೀ ಸದನ ಹಾಗೂ ಇಡೀ ದೇಶ ಮರುಗುವಂತಹ ಪ್ರಸಂಗ ಬಂದಿದೆ. ನಮ್ಮ ರಾಜ್ಯದಲ್ಲಿಯೂ ಕೂಡ ನಾವು ಇವತ್ತು ಪ್ರಾಥಮಿಕ ಶಾಲೆಗಳಲ್ಲಿ ಬಿಸಿ ಊಟವನ್ನು ಪ್ರಾರಂಭ ಮಾಡಿದ್ದೇವೆ. ಬಿಸಿ ಊಟದ ವ್ಯವಸ್ಥೆಗೆ ಪ್ರತ್ಯೇಕವಾದಂಥ ಸ್ಥಳದ ಅವಕಾಶವಿಲ್ಲ. ಹೀಗಾಗಿ ಶಾಲೆಗಳಲ್ಲಿ ನಾವು ಬಿಸಿ ಊಟವನ್ನು ತಯಾರು ಮಾಡುತ್ತಿದ್ದೇವೆ. ಇದರಿಂದ ಹೆಚ್ಚು ಮಕ್ಕಳಿಗೆ ತೊಂದರೆ ಆಗಿ, ಅಲ್ಲಿ ಸ್ಥಳಾವಕಾಶ ಇಲ್ಲದಂತಾಗಿದೆ ಇದರ ಜೊತೆಯಲ್ಲಿ ಬಿಸಿ ಊಟ ಮಾಡತಕ್ಕಂಥ ಸ್ಥಳದಲ್ಲಿ ಸರಿಯಾದಂಥ ಸ್ವಚ್ಛತೆಯನ್ನು ಮಾಡತಕ್ಕಂಥ ವ್ಯವಸ್ಥೆ ಇಲ್ಲ, ನೀರಿನ ವ್ಯವಸ್ಥೆಯಿಲ್ಲ, ವಿದ್ಯುತ್ ದೀಪದ ವ್ಯವಸ್ಥೆಯಿಲ್ಲ, ಅದಕ್ಕಾಗಿ ಸರ್ಕಾರ ಈ ಘಟನೆಯಿಂದ ಎಚ್ಚೆತ್ತು ಬಿಸಿ ಊಟಕ್ಕೆ ಪ್ರತ್ಯೇಕ ಸ್ಥಳಗಳನ್ನು ಕೊಡುವಂಥ ವ್ಯವಸ್ಥೆ ಮಾಡಿದರೆ ಹೆಚ್ಚು ಅನುಕೂಲವಾಗುತ್ತದೆ ಹಾಗೂ ಇಂಥ ಅನಾಹುತಗಳು ತಪ್ಪುತ್ತವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಶಾಲೆಗಳ ಬಗ್ಗೆ ಹೇಳುವುದಾದರೆ, ಶಾಲೆಗಳ ದುಸ್ಥಿತಿಯಂತೂ ಹೇಳ ತೀರದು. ಸುಮಾರು 50–60 ವರ್ಷಗಳ ಹಿಂದೆ ಕಟ್ಟಿರುವಂಥ ಕೆಲವು ಸ್ಕೂಲ್ ಬಿಲ್ಡಿಂಗ್‌ಗಳು ಏನು ಇವೆ. ಅವುಗಳಿಗೆ ಮೇಲೆ ಮಂಗಳೂರು ಟೈಲ್ಸ್ ಹಾಕಿದ್ದಾರೆ. ಮಂಗಳೂರು ಟೈಲ್ಸ್ ಕೆಳಗಡೆ ಹಾಕಿರುವಂಥ ರ‍್ಯಾಫ್ಟರ್ಸ್ ಕೊಳೆತು ಮುಗಿದು ಬಿದ್ದು ಎಷ್ಟೋ ಕಡೆ ಮೇಲ್ಚಾವಣಿ ಇಲ್ಲದೇ ಶಾಲೆಗಳು ನಡೆಯುತ್ತಿವೆ. ಗೋಡೆಗಳು ಬಿರುಕುಬಿಟ್ಟಿವೆ, ಅಂಥ ಅನಾಹುತಗಳನ್ನು ತಪ್ಪಿಸಲಿಕ್ಕೆ ಸರ್ಕಾರ ಶಾಲಾ ಕಟ್ಟಡಗಳ ದುರಸ್ಥಿತಿಗೆ ಮತ್ತು ಹೊಸ ಕಟ್ಟಡಗಳಿಗೆ ಹೆಚ್ಚು ಅನುದಾನ ಕೊಟ್ಟು ಅನಾಹುತವನ್ನು ತಪ್ಪಿಸಲಿಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರುಗಳೇನು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ನಿಂತಿದ್ದೀರಿ. ತಾವು ಎಲ್ಲರೂ ದಯಮಾಡಿ ತಮ್ಮ ತಮ್ಮ ಆಸನಗಳಿಗೆ ಹೋಗಬೇಕು.

+ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಮಚಂದ್ರ ವೀರಪ್ಪ ಮತ್ತು ಪ್ರೊ: ವೆಂಕಟಗಿರಿಗೌಡರವರ ನಿಧನದ ಬಗ್ಗೆ ಏನು ತಾವು ಸಂತಾಪ ಸೂಚನೆಯನ್ನು ತಂದಿದ್ದೀರಿ, ಅದಕ್ಕೆ ನನ್ನ ಸಂಪೂರ್ಣ ಸಹಮತವನ್ನು ವ್ಯಕ್ತಪಡಿಸುತ್ತಾ, ಶ್ರೀ ರಾಮಚಂದ್ರಪ್ಪ ವೀರಪ್ಪನವರ ವಿಷಯದಲ್ಲಿ ಎಲ್ಲರೂ ಮಾತನಾಡಿದ್ದಾರೆ. ಒಬ್ಬ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿ, ಅವರು ಯಾವುದೇ ಪಕ್ಷದಲ್ಲಿ ಇರಲಿ, ಅವರಿಗೆ ಪಕ್ಷ ಗೌಣ, ಅದರೆ ವ್ಯಕ್ತಿತ್ವ ಬಹಳ ಮುಖ್ಯ, ಇದು ರಾಜಕಾರಣದಲ್ಲಿ ಬಹಳ ವಿರಳ. ಅನೇಕ ಪಕ್ಷಗಳ ಗಾಳಿ ಬಂದಾಗ ಕೆಲವರು ಗೆಲ್ಲುತ್ತಾರೆ, ಆ ಗಾಳಿ ಹೋದಾಗ ಕೆಲವರು ಸೋಲುತ್ತಾರೆ. ಆದರೆ ಮಾನ್ಯ

ವೀರಪ್ಪನವರಿಗೆ ಎಂಥ ಎದುರಾಳಿ ಬಂದರೂ ಸೋಲಿಸಲಿಕ್ಕೆ ಆಗಲಿಲ್ಲ, ಅಥವಾ ಯಾವ ಪಕ್ಷದಲ್ಲಿದ್ದರೂ ಅವರನ್ನು ಸೋಲಿಸುವಂಥ ಕಷ್ಟ ಯಾರಿಗೂ ಆಗಲಿಲ್ಲ. ಇದನ್ನು ನೋಡಿ ಅವರು ತಮ್ಮ ವ್ಯಕ್ತಿತ್ವವನ್ನು ಎಷ್ಟು ಬೆಳೆಸಿಕೊಂಡಿದ್ದರು ಎನ್ನುವಂಥದ್ದನ್ನು ನಾವೆಲ್ಲಾ ನೆನಪಿಸಿಕೊಳ್ಳಬೇಕಾಗಿದೆ. ಅದರಲ್ಲೂ ಒಬ್ಬ ಪರಿಶಿಷ್ಟ ಜಾತಿಯಲ್ಲಿ, ನನಗೆ ಇಬ್ಬರು ಜ್ಞಾಪಕಕ್ಕೆ ಬರುತ್ತಾರೆ, ಒಂದು ಶ್ರೀ ರಾಮಚಂದ್ರ ವೀರಪ್ಪನವರು ಒಬ್ಬ ರಾಜಕಾರಣಿಯಾಗಿ ಸ್ವತಂತ್ರ ಹೋರಾಟಗಾರರಾಗಿ, ಮತ್ತೊಬ್ಬರು ಶ್ರೀ ಲಕ್ಷ್ಮಣಯ್ಯ ಅವರೂ ಕೂಡ ಹಾಗೆಯೇ. ಅವರು ಒಬ್ಬ ವಿಜ್ಞಾನಿಯಾಗಿ ರಾಗಿ ಬೆಳೆಯನ್ನು ತಮ್ಮ ಮನೆಯಲ್ಲಿ ಎಲ್ಲಾ ಫ್ಲವರ್ ಫ್ಲಾಟ್ಸ್‌ನಲ್ಲಿ ಇಟ್ಟಿದ್ದರು. ನಾನು ಅವರು ಬದುಕಿದ್ದಾಗ ಒಂದು ಸಲ ಅವರ ಮನೆಗೆ ಹೋಗಿದ್ದೆ. ಒಬ್ಬ ವಿಜ್ಞಾನಿ ರಾಗಿ ಬೆಳೆಯನ್ನು ತನ್ನ ಮನೆಯಲ್ಲಿ ಬೆಳೆಸಿಕೊಂಡಿದ್ದರು. ನಾನು ಅವರನ್ನು ಕೇಳಿದೆ, ಏನ್ರೀ ರಾಗಿ ಬೆಳೆಯನ್ನು ಹೂವಿನ ಪಾಟ್ಸ್ ಇಟ್ಟಿರುವ ಹಾಗೆ ಇಟ್ಟಿದ್ದೀರಿ, ಇದನ್ನು ಏಕೆ ಇಟ್ಟಿದ್ದೀರಿ ಎಂದು ಕೇಳಿದರೆ, ನಾನು ಹಿಟ್ಟನ್ನು ತಿಂದು ಬದುಕಿರುವವನು ಇದರಿಂದ ರಾಜ್ಯಕ್ಕೆ ಏನಾದರೂ ಅನುಕೂಲವಾಗಲಿ ಎನ್ನುವ ಮಾತನ್ನು ಹೇಳಿದರು. ಅವರನ್ನು ಬಿಟ್ಟರೆ ಶ್ರೀ ರಾಮಚಂದ್ರ ವೀರಪ್ಪನವರು ಅವರ ಹೋರಾಟಗಳ ಜೊತೆಗೆ ರಾಜಕಾರಣದಲ್ಲಿ ಯಾವುದೇ ಪಕ್ಷದಲ್ಲಿದ್ದರೂ ಅವರನ್ನು ಗೆಲ್ಲಿಸುವಂಥ ಅವಕಾಶಗಳನ್ನು ಜನರು ಬಿಂಬಿಸುತ್ತಿದ್ದರು. ನಾನು ಒಂದು ಸಾರಿ ದೆಹಲಿ ವಿಮಾನ ನಿಲ್ದಾಣದಲ್ಲಿದ್ದಾಗ ಯಾರೋ ಒಬ್ಬರು ಅವರನ್ನು ಪರಿಚಯ ಮಾಡಿಸಿದರು, ಬಹುಶಃ ಮಾನ್ಯ ಗುರುಪಾದಪ್ಪನವರೇ ಇರಬಹುದು. ಅವರು ಮಾತನಾಡಿದ ಧಾಟಿಯ ರೀತಿ ನೋಡಿದಾಗ ನನಗೆ ಮತ್ತಷ್ಟು ಅವರ ಮೇಲೆ ನನ್ನದೇ ಆದಂಥ ಭಾವನೆಗಳನ್ನು ಬೆಳೆಸಿಕೊಳ್ಳುವಂಥ ಪರಿಸ್ಥಿತಿ ಬರತು. ಅಂತವರು ಇಂದು ಆಗಲಿದ್ದಾರೆ, ಈಗ ನಾವು ಅಲ್ಲಿ ಒಂದು ಪಶುಸಂಗೋಪನಾ ಯೂನಿವರ್ಸಿಟಿಯನ್ನು ಮಾಡುತ್ತಿದ್ದೇವೆ, ಅದಕ್ಕೆ ಅವರ ಹೆಸರನ್ನು ಇಟ್ಟರೆ ಒಳ್ಳೆಯದೇನೋ ಎನ್ನುವಂಥ ಮಾತನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಪ್ರಸ್ತಾಪ ಮಾಡುವವನು ಇದ್ದೇನೆ, ಇದನ್ನು ಮಾಡಬೇಕು ಎಂದು ಹೇಳಿ, ಅವರ ಭಾವಚಿತ್ರವನ್ನು ಹಾಕಬೇಕು ಎಂದು ಹೇಳುತ್ತೇನೆ. ನಿಜವಾಗಿಯೂ ನಾವು ಒಬ್ಬ ದೊಡ್ಡ ರಾಜಕಾರಣಿಯನ್ನು ಕಳೆದುಕೊಂಡಿದ್ದೇವೆಂದು ಹೇಳುತ್ತೇನೆ. ಎರಡನೆಯದಾಗಿ ಪ್ರೊ: ವೆಂಕಟಗಿರಿಗೌಡರವರು, ಇವರ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ, ಅವರು ಅರ್ಥಶಾಸ್ತ್ರಜ್ಞರು, ಅವರದ್ದು ಒಂದು ಕಥೆಯನ್ನು ನಮಗೆ ಹೇಳುತ್ತಿದ್ದರು. ನಿಮ್ಮ ಜಿಲ್ಲೆಯಲ್ಲಿ ಅವರು ಎಸ್‌ಎಸ್‌ಎಲ್‌ಸಿ ಓದುವಾಗ, ಒಬ್ಬ ಪ್ರತಿಷ್ಠಿತ ವ್ಯಕ್ತಿಯ ಮನೆಗೆ ಹಾಸ್ಟೆಲ್‌ನಲ್ಲಿ ಸೀಟು ಕೇಳುವುದಕ್ಕೆ ಹೋಗುತ್ತಾರೆ. ಆಗ ಅವರು ಉತ್ತುಕೊಂಡಿರು, ಬಿತ್ತಿಕೊಂಡಿರು, ನಿನಗ್ಯಾಕೆ ಎಂದು ಹೇಳುತ್ತಾರೆ. ಆಗ ಆ ಮನುಷ್ಯ ಹಾಗೇ ಬಂದು ಕಷ್ಟಪಟ್ಟು ಓದು ತಾನು ದೊಡ್ಡ ವಿದ್ಯಾವಂತನಾದ ಮೇಲೆ, ಆ ಪ್ರತಿಷ್ಠಿತ ವ್ಯಕ್ತಿ ತನ್ನ ಮಗಳನ್ನೇ ಅವರಿಗೆ ಕೊಡಬೇಕೆಂದು ಇವರನ್ನು ಕರೆಸಿದಾಗ, ಉಳುವವನು ಒಬ್ಬನಿದ್ದಾನೆ, ಅವನಿಗೆ ಕೊಟ್ಟು ಮದುವೆ ಮಾಡಿರಿ ನನಗ್ಯಾಕೆ ಕೊಡಬೇಕು ಎನ್ನುವಂಥ ಮಾತುಗಳನ್ನು ಆಡುತ್ತಾರೆ. ಇದು ನಿಮಗೆ ಗೊತ್ತಿದೆ. ಇದನ್ನು ಜ್ಞಾಪಿಸಿಕೊಂಡಾಗ ಆ ಮನುಷ್ಯ ಪ್ರೊ: ವೆಂಕಟಗಿರಿಗೌಡರವರು ನಾನು ಏನು ಹೇಳಬೇಕು ಎನ್ನುವುದನ್ನು ಮುಚ್ಚು ಮರೆಯಿಲ್ಲದೆ ಹೇಳುವಂಥ ಸ್ವಭಾವವನ್ನು ಬೆಳೆಸಿಕೊಂಡಿದ್ದರು. ಇದು ಅವರ ರಾಜಕಾರಣ ಇರಬಹುದು, ಅವರ ಮನೆಯ ವಿಷಯದಲ್ಲಿ ಕೂಡ ಇರಬಹುದು ಎಂದೂ ಕೂಡ ಅವರ ಮನಸ್ಸು ಹೇಗೆ ಇತ್ತೋ ಆ

ರೀತಿ ಬಾಳಿದಂತವರು. ಯಾರ ಮೇಲಾದರೂ ಸಿಟ್ಟು ಬಂದರೆ, ಅವರ ಮೇಲೆ ಕೂಡ ಪುಸ್ತಕ ಬರೆದಿರುವುದು ಇದೆ. ಅದಕ್ಕೆ ಅವರು ಅಂಜಿಕೊಳ್ಳುವುದಿಲ್ಲ. ಅವರು ಅಷ್ಟು ದೊಡ್ಡವರು ಇದ್ದಾರೆ, ಇಷ್ಟು ದೊಡ್ಡವರು ಇದ್ದಾರೆ ಎನ್ನುವಂಥ ಭಾವನೆಗಳೂ ಕೂಡ ಅವರಿಗೆ ಇರಲಿಲ್ಲ. ಅವರು ಯಾರಿಗೂ ಹೆದರಿದವರು ಅಲ್ಲ. ಇಂಥವರು ಕೂಡ ನಮ್ಮನ್ನು ಇವತ್ತು ಅಗಲಿದ್ದಾರೆ, ಅವರಿಗೂ ಕೂಡ ನನ್ನ ಸಂತಾಪವನ್ನು ವ್ಯಕ್ತಪಡಿಸಿ, ತಾವು ಏನು ಸಂತಾಪ ಸೂಚನೆ ತಂದಿದ್ದೀರಿ, ಅದಕ್ಕೆ ಸಹಮತವನ್ನು ವ್ಯಕ್ತಪಡಿಸುತ್ತೇನೆ. ತಮಿಳುನಾಡಿನ ಕುಂಬಕೋಣಂನಲ್ಲಿ ನಿಜವಾಗಿಯೂ ಆ ಮಕ್ಕಳ ಶವವನ್ನು ನೋಡಿದಾಗ, ಇದ್ದಿಲು ಯಾವ ರೀತಿ ಕಾಣಿಸುತ್ತಿತ್ತೋ ಆ ರೀತಿ ಕಾಣಿಸುತ್ತಿತ್ತು. ಮರಗಳನ್ನು ಸುಟ್ಟಾಗ ಯಾವ ರೀತಿ ಇದ್ದಿಲು ಆಗುತ್ತಿತ್ತೋ ಆ ರೀತಿಯಲ್ಲಿ ಆ ಮಕ್ಕಳ ಶವಗಳನ್ನು ನೋಡುವಾಗ ಮನಸ್ಸಿಗೆ ಬಹಳ ನೋವಾಯಿತು. ನಾನೊಂದು ವಿಷಯ ಹೇಳುವುದೇನೆಂದರೆ, ಈಗೇನು ನಮ್ಮ ರಾಜ್ಯದಲ್ಲಿ ಗ್ಯಾಸ್ ಕೊಟ್ಟಿದ್ದೇವೆ, ಗ್ಯಾಸ್ ಸ್ಟೌವ್‌ಗಳನ್ನು ಕೊಟ್ಟಿದ್ದೇವೆ. ಇದು ಬಹಳ ಸೂಕ್ಷ್ಮವಾಗಿರುವುದರಿಂದ ಅದನ್ನು ಸರಿಯಾಗಿ ಉಪಯೋಗಿಸದಿದ್ದರೆ, ಇದರ ಕಷ್ಟ ಇಡೀ ಸ್ಕೂಲ್‌ಗಳಿಗೆ ಆಗುವ ಮೂಲಕ ಆ ಮಕ್ಕಳಿಗೆ ಆಗುತ್ತದೆ. ಆದುದರಿಂದ ಇದನ್ನು ಕಟ್ಟುನಿಟ್ಟಾಗಿ ಇವತ್ತಿನಿಂದ, ಅದಕ್ಕೆ ಯಾವ್ಯಾವ ರೀತಿಯ ಸೇಫ್ಟಿಯನ್ನು ನಾವು ಮಾಡಬೇಕು ಅದನ್ನು ಮಾಡುವುದಕ್ಕೆ ಏನಿದೆ ಅದನ್ನು ಬೆಂಬಲಿಸಿ ಶ್ರಮವಹಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ತಾವು ತಂದಿರುವಂಥ ಸಂತಾಪ ಸೂಚನೆ ಮಾನ್ಯ ರಾಮಚಂದ್ರ ವೀರಪ್ಪನವರಿಗೂ ಹಾಗೂ ಪ್ರೊ: ವೆಂಕಟಗಿರಿ ಗೌಡರವರಿಗೂ ಶ್ರದ್ಧಾಂಜಲಿ ಸೂಚಿಸುತ್ತಾ, ಇವರಿಬ್ಬರು ಏನು ನನ್ನನ್ನು ಅಗಲಿದ್ದಾರೆ ಅವರ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

12.10 ಪಿಎಂ

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಮಚಂದ್ರ ವೀರಪ್ಪ ಮತ್ತು ಮಾನ್ಯ ವೆಂಕಟಗಿರಿಗೌಡ ಅವರುಗಳ ಬಗ್ಗೆ ತಾವು ತಂದಿರತಕ್ಕಂಥ ಸಂತಾಪ ಸೂಚಕ ನಿರ್ಣಯಕ್ಕೆ ಅನುಮೋದನೆ ಮಾಡುತ್ತಾ, ಮಾನ್ಯ ರಾಮಚಂದ್ರ ವೀರಪ್ಪನವರ ಬಗ್ಗೆ ಹೇಳುವುದಾದರೆ, ಶ್ರೀಯುತರನ್ನು ನಾನು ಬಹಳ ವರ್ಷಗಳ ಕಾಲ ಬಹಳ ಹತ್ತಿರದಿಂದ ನೋಡಿದ್ದೇನೆ. ಅವರು ನೇರ ನುಡಿಯ ಒಬ್ಬ ರಾಜಕಾರಣಿಯಾಗಿದ್ದರು. ಬೇರೆಲ್ಲಾ ರಾಜಕಾರಣಿಗಳು ಚುನಾವಣೆ ಇರಲಿ ಅಥವಾ ಇಲ್ಲದೇ ಇರಲಿ, 5 ವರ್ಷಗಳವರೆಗೂ ಬಡಿದಾಡುತ್ತಿರುತ್ತಾರೆ; ಕೆಲವರು ಚುನಾವಣೆ ಸಂದರ್ಭದಲ್ಲಿ ಬಡಿದಾಡುತ್ತಾರೆ. ಆದರೆ, ರಾಜಕೀಯ ಜೀವನದಲ್ಲಿ ಒಬ್ಬ ವೈರಿಯೂ ಇಲ್ಲದಂಥ ವ್ಯಕ್ತಿಯೆಂದರೆ ಮಾನ್ಯ ರಾಮಚಂದ್ರ ವೀರಪ್ಪನವರು ಎಂದು ಹೇಳಬಹುದು. ಪಕ್ಷಾತೀತವಾಗಿ ಎಲ್ಲಾ ವ್ಯಕ್ತಿಗಳು ಇವರನ್ನು ಇಷ್ಟಪಡತಕ್ಕಂಥ ಒಬ್ಬ ನೇತಾರರಾಗಿದ್ದರು. ರಾಜಕಾರಣಿಗಳು ಯಾವ ರೀತಿ ಇರಬೇಕೆಂಬುದರ ಬಗ್ಗೆ ಒಂದು ದೊಡ್ಡ ಸಭೆಯಲ್ಲಿ ಒಂದು ಮಾತನ್ನು ಹೇಳಿದ್ದರು. ಅದೇನೆಂದರೆ, ನನ್ನ ಬಗ್ಗೆ ಯಾರೊಬ್ಬ ವಿರೋಧಿ ಆಪಾದನೆ ಮಾಡಿದರೆ ಈ ಒಂದು ರಾಜಕೀಯ ಕ್ಷೇತ್ರದಿಂದ ನಿವೃತ್ತಿಯಾಗುತ್ತೇನೆ ಎನ್ನುತಕ್ಕಂಥ ಮಾತನ್ನು ಅವರು ಸವಾಲು ರೂಪದಲ್ಲಿ ಹೇಳಿದ್ದರು. ಎಲ್ಲಾ ರಾಜಕಾರಣಿಗಳು ಶ್ರೀ ಸಾಮಾನ್ಯನ ಜೊತೆಯಲ್ಲಿ ಯಾವ ರೀತಿ ಇರಬೇಕೆಂಬುದಕ್ಕೆ ಉದಾಹರಣೆಯಾಗಿ ಒಬ್ಬ ಆದರ್ಶವಾದಿ ರಾಜಕಾರಣಿಯಾಗಿ ಅವರ ಇಡೀ ರಾಜಕೀಯ ಜೀವನವನ್ನು ನಡೆಸಿಕೊಂಡು

ಬಂದಂಥ ವ್ಯಕ್ತಿಯಾಗಿದ್ದಾರೆ. ಇಂಥ ವ್ಯಕ್ತಿಯ ಜೀವನ ನಮ್ಮೆಲ್ಲರಿಗೂ ಮಾರ್ಗದರ್ಶನವಾಗುತ್ತದೆಂದು ನಾನು ಭಾವಿಸುತ್ತೇನೆ. ಮತ್ತೆ ಪ್ರೊ: ವೆಂಕಟಗಿರಿಗೌಡರು ಖ್ಯಾತ ಆರ್ಥಿಕ ತಜ್ಞರಾಗಿದ್ದರು, ಮತ್ತು ತುಂಬಾ ನಿಷ್ಠೂರವಾದಿಯಾಗಿದ್ದರು. ಹಾಗೆಯೇ ನೇರ ನುಡಿಗೆ ಇನ್ನೊಂದು ಹೆಸರು ಶ್ರೀ ವೆಂಕಟಗಿರಿ ಗೌಡರು ಎನ್ನತಕ್ಕಂಥ ಮಾತನ್ನು ನಾವೆಲ್ಲಾ ಕೇಳಿದ್ದೇವೆ. ಮತ್ತು ಕುಂಭಕೋಣಂನಲ್ಲಿ ನಡೆದಂಥ ಘಟನೆಯಲ್ಲಿ 90 ಮಕ್ಕಳು ಸತ್ತಿರತಕ್ಕಂಥ ಒಂದು ವಿಷಯವನ್ನು ನಾವು ಮರೆಯುವುದಕ್ಕೆ ಸಾಧ್ಯವಿಲ್ಲ. ಈ ಒಂದು ಘಟನೆಯನ್ನು ರಾಜ್ಯ ಸರ್ಕಾರ ನೆನಪಿನಲ್ಲಿಟ್ಟುಕೊಂಡು, ಮುಂದೆ ಎಂದಿಗೂ ಕೂಡ ಈ ರೀತಿಯಾದ ಒಂದು ಘಟನೆ ಇಲ್ಲಿ ಆಗದೇ ಇರುವಂತೆ ನೋಡಿಕೊಳ್ಳಲು ಸರ್ಕಾರ ಸದಾ ಕಣ್ಣನ್ನು ತೆರೆದಿರಲಿ ಎಂಬ ವಿಷಯವನ್ನು ತಿಳಿಸುತ್ತಾ, ನಮ್ಮನ್ನು ಆಗಲಿರತಕ್ಕಂಥ ಮಾನ್ಯ ವೆಂಕಟಗಿರಿ ಗೌಡರು ಮತ್ತು ಮಾನ್ಯ ರಾಮಚಂದ್ರ ವೀರಪ್ಪನವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಹಾಗೆಯೇ 90 ಮಕ್ಕಳ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ತಮ್ಮ ನಿರ್ಣಯಕ್ಕೆ ಬೆಂಬಲವನ್ನು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರಗಜ್ಞಾನೇಂದ್ರ (ತೀರ್ಥಹಳ್ಳಿ) : ಸನ್ಮಾನ್ಯ ಅಧ್ಯಕ್ಷರೆ, ತಾವು ಈ ದಿನ ತಂದಿರತಕ್ಕಂಥ ಸಂತಾಪ ಸೂಚನ ನಿರ್ಣಯವನ್ನು ಬೆಂಬಲಿಸುತ್ತೇನೆ. ಸಾರ್ವಜನಿಕ ಬದುಕಿನಲ್ಲಿರತಕ್ಕಂಥ ನಮ್ಮೆಲ್ಲರಿಗೂ ಅನುಕರಣೀಯ ವ್ಯಕ್ತಿತ್ವ ಮಾನ್ಯ ರಾಮಚಂದ್ರ ವೀರಪ್ಪನವರದು. ನಮ್ಮ ಪಕ್ಷಕ್ಕೆ ನಾನು ಬಂದ ನಂತರ ಅನೇಕ ಬಾರಿ ಅವರ ಜೊತೆಯಲ್ಲಿರತಕ್ಕಂಥ ಪ್ರಸಂಗಗಳು ಬಂದಿದ್ದವು. ಅವರ ಮೈಯಲ್ಲಿ ಅನೇಕ ಕಲೆಗಳಿರತಕ್ಕಂಥದ್ದನ್ನು ನಾನು ನೋಡಿದ್ದೆ. ನಾವು ಯುವಕರಾಗಿದ್ದಾಗ ಯಾವ ರೀತಿಯಾಗಿ ಹೋರಾಟ ಮಾಡಿದ್ದೇವೆ ನೋಡಿ ಎನ್ನತಕ್ಕಂಥ ಮಾತನ್ನು ಅವರು ಹೇಳುತ್ತಿದ್ದರು. ನಿಜಾಮರ ಮತ್ತು ರೆಜಾಕ್‌ರ ವಿರುದ್ಧ ನಾವು ಮಾಡಿರತಕ್ಕಂಥ ಹೋರಾಟದ ಪರಿಣಾಮವೇ ಅವರ ಮೈಯಲ್ಲಿ ಇರತಕ್ಕಂಥ ಕಲೆಗಳು ಅವು ಇತ್ತೀಚಿನವರೆಗೂ ಮಾಸದೆ ಹಾಗೆಯೇ ಉಳಿದಿವೆ. ಇಂಥ ಒಂದು ಹೋರಾಟದಿಂದ ಶ್ರೀಯುತರು ಬಂದಿದ್ದರು. ಅತೀ ದೀರ್ಘ ಅವಧಿಯ ಒಂದು ಸಾರ್ವಜನಿಕ ಬದುಕಿನಲ್ಲಿದ್ದಂಥ ವ್ಯಕ್ತಿಗಳನ್ನು ಚುನಾವಣೆಯಿಂದ ಚುನಾವಣೆಯ ಅವಧಿಯಲ್ಲಿ ಕಳೆದುಕೊಳ್ಳುತ್ತಾ ಬರುತ್ತಿದ್ದೇವೆ. ಆದರೆ, ಮಾನ್ಯ ರಾಮಚಂದ್ರ ವೀರಪ್ಪನವರಿಗೆ ಆ ರೀತಿ ಆಗಲಿಲ್ಲ. ಇವರು ಪ್ರತಿ ಸಾರಿ ಆಯ್ಕೆ ಆಗುತ್ತಿದ್ದಾಗಲೂ ಜನರ ಪ್ರೀತಿ ಜಾಸ್ತಿಯಾಗುತ್ತಾ ಬರುತ್ತಿದುದ್ದನ್ನು ನಾವು ನೋಡಿದ್ದೇವೆ. ನಮ್ಮ ಒಂದು ಸಾರ್ವಜನಿಕ ಜೀವನದಲ್ಲಿ ಇವರ ಒಂದು ಬದುಕು ಆದರ್ಶ ಮತ್ತು ಅನುಕರಣೀಯವಾಗಿದೆ ಎಂದು ನನಗನ್ನಿಸುತ್ತದೆ. ಈ ಸಂದರ್ಭದಲ್ಲಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮಾನ್ಯ ರಾಮಚಂದ್ರ ವೀರಪ್ಪನವರ ಹೆಸರಿನಲ್ಲಿ, ಇವರ ಜೀವನಚರಿತ್ರೆ ಮತ್ತು ಬದುಕನ್ನು ಸದಾಕಾಲ ಚಿರಂತನವಾಗಿ ಇಡಬೇಕಾದರೆ, ಅವರ ಬದುಕಿನ ವೃತ್ತಾಂತವನ್ನು ತಿಳಿಸತಕ್ಕಂಥ ಒಂದು ಪುಸ್ತಕವನ್ನು ಸರ್ಕಾರದ ಕಡೆಯಿಂದ ಮುದ್ರಿಸಿ ಎಲ್ಲರಿಗೂ ಹಂಚತಕ್ಕಂಥದ್ದು ಅಗತ್ಯವಿದೆ ಎಂದು ನನಗನ್ನಿಸುತ್ತದೆ. ಏಕೆಂದರೆ, ದಲಿತವರ್ಗದಿಂದ ಬಂದಿರತಕ್ಕಂಥ ಈ ಮನುಷ್ಯ ಇಷ್ಟು ವರ್ಷಗಳ ಕಾಲ ಸುಧೀರ್ಘವಾಗಿ ಸಾರ್ವಜನಿಕ ಸೇವೆಯಲ್ಲಿದ್ದು, ರಾಷ್ಟ್ರ ಮತ್ತು ರಾಜ್ಯದ ಎರಡೂ ಸದನಗಳಲ್ಲಿ ಕೆಲಸ ಮಾಡಿದ್ದರು ಎನ್ನತಕ್ಕಂಥ ವಿಷಯವನ್ನು ನಮ್ಮ ಮುಂದಿನ ಪೀಳಿಗೆಗೆ ತಿಳಿಸಬೇಕಾಗುತ್ತದೆ. ಇವರ ಜೀವನದ ಕೊನೆಯವರೆಗೆ ಅವರಿಗೆ ಇದ್ದಂಥ ಒಂದು ಸಣ್ಣ

ಮನೆ, ಅವರ ಬದುಕಿನ ಸರಳತನ, ನಮ್ಮೆಲ್ಲರಿಗೂ ಸಹ ನಿಜವಾಗಿಯೂ ನೆನಪಿನಲ್ಲಿ ಉಳಿದು ಕೊಳ್ಳತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಪ್ರೊ: ವೆಂಕಟಗಿರಿಗೌಡರು ಅರ್ಥಶಾಸ್ತ್ರಜ್ಞರಾಗಿ ಮತ್ತು ಪಾರ್ಲಿಮೆಂಟ್ ಸದಸ್ಯರಾಗಿ ಈ ರಾಜ್ಯಕ್ಕೆ ಬಹಳ ದೊಡ್ಡ ಸೇವೆಯನ್ನು ಸಲ್ಲಿಸಿದ್ದಾರೆ. ಅನೇಕ ಸಾರಿ ಅವರ ಹೇಳಿಕೆಗಳು ಮತ್ತು ಅವರ ಮಾತುಗಳು ವಿವಾದಕ್ಕೆ ಎಡೆಮಾಡಿಕೊಡುತ್ತಿದ್ದವು. ಆದರೂ ಕೂಡ ಎಲ್ಲಿಯೂ ಜಗ್ಗದೆ ಅವರು ಏನು ಹೇಳಬೇಕಾಗಿತ್ತೋ ಅದನ್ನು ಹೇಳುವಂಥ ವ್ಯಕ್ತಿತ್ವ ಇತ್ತು. ಮತ್ತೆ ಬಹಳ ದೊಡ್ಡ ಅರ್ಥಶಾಸ್ತ್ರಜ್ಞರಾಗಿ ನಮ್ಮ ರಾಜ್ಯಕ್ಕೆ ದೊಡ್ಡ ಕೀರ್ತಿಯನ್ನು ತಂದಿದ್ದರು. ಮತ್ತೆ ಕುಂಭಕೋಣಂನಲ್ಲಿ ಆಗಿರತಕ್ಕಂಥ ಒಂದು ಘಟನೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ಸಚಿವರು ಗಮನಹರಿಸಬೇಕಾಗಿದೆ. ಏಕೆಂದರೆ, ನಮ್ಮ ರಾಜ್ಯದಲ್ಲಿರತಕ್ಕಂಥ ಅನೇಕ ಶಾಲೆಗಳಲ್ಲಿ ಬೆಂಕಿ ಅನಾಹುತವಾಗುವುದರ ಬಗ್ಗೆ ಮತ್ತು ನಮ್ಮ ಶಾಲೆಗಳು ಇದ್ದಕ್ಕಿದಂತೆ ಕುಸಿದು ಬಿದ್ದು ನೂರಾರು ಮಕ್ಕಳು ಸಜೀವವಾಗಿ ಸತ್ತು ಹೋಗತಕ್ಕಂಥ ಪರಿಸ್ಥಿತಿ ಉದ್ಭವವಾಗಬಹುದು. ರಿಪೇರಿ ಮಾಡಿ ಎಂದು ನಾವು ಹೇಳಿದರೂ ಕೂಡ ಇವುಗಳನ್ನು ರಿಪೇರಿ ಮಾಡುವುದಕ್ಕೆ ಹಣ ಇಲ್ಲದೇ ಇರತಕ್ಕಂಥ ಪರಿಸ್ಥಿತಿಯನ್ನು ನೋಡಿದ್ದೇವೆ. ಶಾಲಾ ರಿಪೇರಿ ಬಗ್ಗೆ ನಾವು ಯಾವುದಾದರೂ ಸಭೆಯಲ್ಲಿ ಪ್ರಸ್ತಾಪ ಮಾಡಿದರೆ, ತಾಲ್ಲೂಕು ಪಂಚಾಯಿತಿಯ ಎಗ್ಸಿಕ್ಯೂಟಿವ್ ಆಫೀಸರ್ ಜಿಲ್ಲಾ ಪಂಚಾಯತಿಯ ಇಂಜಿನಿಯರ್‌ರವರ ಕಡೆ ಕೈ ತೋರಿಸುತ್ತಾರೆ. ಇಂಜಿನಿಯರ್‌ರವರು ಸರ್ಕಾರದ ಕಡೆ ಕೈತೋರಿಸುತ್ತಾರೆ. ಈ ರೀತಿಯಾದರೆ ನಾವೇನು ಮಾಡುವುದು? ಕುಂಭಕೋಣಂನಲ್ಲಿ ಆಗಿರತಕ್ಕಂಥ ದುರಂತ ನಮ್ಮ ರಾಜ್ಯದಲ್ಲಿ ಆಗದೇ ಇರುವಂಥ ರೀತಿಯಲ್ಲಿ ತಡೆಗಟ್ಟುವಂಥ ಕ್ರಮವನ್ನು ನಾವು ಮುಂಜಾಗ್ರತೆಯಾಗಿ ತೆಗೆದುಕೊಳ್ಳಬೇಕಾಗುತ್ತದೆಂದು ನಾನು ವಿನಂತಿ ಮಾಡಿಕೊಳ್ಳುತ್ತಾ ಮೃತರೆಲ್ಲರ ಆತ್ಮಕ್ಕೆ ಭಗವಂತ ಶಾಂತಿಯನ್ನು ಕೊಡಲಿ ಎಂದು ಈ ಸಂದರ್ಭದಲ್ಲಿ ಹಾರೈಸಿ ತಾವು ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಬೇಲೂರು) : ಮಾನ್ಯ ಸಭಾಧ್ಯಕ್ಷರೆ, ತಾವು ತಂದಿರತಕ್ಕಂಥ ಸಂತಾಪ ಸೂಚನೆಯ ನಿರ್ಣಯಕ್ಕೆ ನಾನೂ ಕೂಡ ಬೆಂಬಲಿಸುತ್ತೇನೆ. ಮಾನ್ಯ ರಾಮಚಂದ್ರ ವೀರಪ್ಪನವರ ನಿಧನ ಬಗ್ಗೆ ಅನೇಕ ಮಾನ್ಯ ಸದಸ್ಯರು ಅನೇಕ ಅಭಿಪ್ರಾಯಗಳನ್ನು ಇಲ್ಲಿ ಈಗಾಗಲೇ ವ್ಯಕ್ತಪಡಿಸಿದ್ದಾರೆ. ಶ್ರೀಯುತರು 7 ಸಾರಿ ಲೋಕಸಭಾ ಸದಸ್ಯರಾಗಿ ಮತ್ತು ಎರಡು ಬಾರಿ ವಿಧಾನಸಭೆ ಮತ್ತು ಒಂದು ಸಾರಿ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಅವರ ಅನುಭವವನ್ನು ನಾವುಗಳು ಅಂದರೆ, ಕಾಂಗ್ರೆಸ್ ಪಕ್ಷದ ಸದಸ್ಯರಾಗಲಿ, ಭಾರತೀಯ ಜನತಾ ಪಕ್ಷದ ಸದಸ್ಯರಾಗಲಿ ಅಥವಾ ಯಾವುದೇ ಪಕ್ಷದ ಸದಸ್ಯರಾಗಿರತಕ್ಕಂಥ ನಾವು ಒಬ್ಬ ದಲಿತ ನಾಯಕನ ಅನುಭವವನ್ನು ಬಳಸಿಕೊಳ್ಳುವುದರಲ್ಲಿ ವಿಫಲವಾಗಿದ್ದೇವೆ. ಹಾಗೆಯೇ, ಇವರನ್ನು ಯಾವುದೇ ಸರ್ಕಾರ ಅಥವಾ ಪಕ್ಷಗಳು ಗುರುತಿಸಿಲ್ಲ ಎನ್ನತಕ್ಕಂಥದ್ದನ್ನು ನಾವು ನೋಡಬೇಕಾಗುತ್ತದೆ. ಈ ಸಂದರ್ಭದಲ್ಲಿ ನಾವು ಕೇವಲ ಸಂತಾಪವನ್ನು ಸೂಚಿಸಬಹುದೇ ವಿನಃ ಈ ಹಂತದಲ್ಲಿ ಬೇರೇನು ಮಾಡುವುದಕ್ಕೆ ಸಾಧ್ಯವಿಲ್ಲ. ಅವರ ವಯಸ್ಸು ಮತ್ತು ಅನಾರೋಗ್ಯ ಶ್ರೀಯುತರ ನಿಧನಕ್ಕೆ ಕಾರಣವಾಗಿದೆ. ಅವರ ಆತ್ಮಕ್ಕೆ ಸಂತಾಪವನ್ನು ಕೋರುತ್ತೇನೆ. ಮತ್ತೆ ಪ್ರೊ: ವೆಂಕಟಗಿರಿಗೌಡರ ನಿಧನವೂ ಕೂಡ ಒಂದು ಆರ್ಥಿಕ

ಶಕ್ತಿಗೆ ಅವರ ಜ್ಞಾನದ ಅಗತ್ಯತೆ ಇತ್ತು ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಕುಂಭಕೋಣಂನಲ್ಲಿ ಸಂಭವಿಸಿರತಕ್ಕಂಥ ಘಟನೆ ಕೇವಲ ತಮಿಳುನಾಡು ರಾಜ್ಯಕ್ಕೆ ಸಂಬಂಧ ಪಡತಕ್ಕದ್ದಲ್ಲ. ಅದು ನಮ್ಮ ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿರಕ್ಕತಂಥ ಎಲ್ಲಾ ಶಾಲೆಗಳಿಗೆ ಎಚ್ಚರಿಕೆ ನೀಡಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಶಾಲೆಯಲ್ಲಿ ಮಕ್ಕಳನ್ನು ಕೊಠಡಿಗಳಲ್ಲಿ ಕೂಡಿ ಹಾಕತಕ್ಕಂಥ ಕೆಲಸವನ್ನು ಮಾಡಬಾರದು. ವಿರಾಮ ಕಾಲದಲ್ಲಿ ಮಕ್ಕಳಿಗೆ ಸಾಕಷ್ಟು ಅವಕಾಶಗಳನ್ನು ಕೊಟ್ಟು ಹೊರಕ್ಕೆ ಬಿಡತಕ್ಕಂಥ ಪರಿಪಾಠವನ್ನು ಸರ್ಕಾರಿ ಅಥವಾ ಖಾಸಗಿ ಶಾಲೆಗಳು ಬೆಳಸಿಕೊಳ್ಳಬೇಕು. ಇವತ್ತಿನ ದಿವಸ ವಿರಮ ಕಾಲದಲ್ಲಿಯೂ ಕೂಡ ಮಕ್ಕಳನ್ನು ಹೊರಕ್ಕೆ ಬಿಡದೆ ಅಲ್ಲಿಯೇ ಕೂಡಿ ಹಾಕತಕ್ಕಂಥ ಪರಿಸ್ಥಿತಿ ಇದೆ. ಯಾರನ್ನು ಕೂಡ ಹೊರಕ್ಕೆ ಬಿಡತಕ್ಕಂಥ ಸ್ಥಿತಿಯನ್ನು ನಾವು ನೋಡಿಲ್ಲ. ಇದನ್ನು ಸರ್ಕಾರ ಕೂಡ ಬಹಳ ಎಚ್ಚರಿಕೆಯಿಂದ ನೋಡಬೇಕೆಂದು ಹೇಳುತ್ತಾ ತಾವು ತಂದಿರತಕ್ಕಂಥ ಸಂತಾಪ ಸೂಚಕ ನಿರ್ಣಯಕ್ಕೆ ನಾನೂ ಕೂಡ ಬೆಂಬಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) : ಸನ್ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರತಕ್ಕಂಥ ಸಂತಾಪ ಸೂಚಕ ನಿರ್ಣಯಕ್ಕೆ ಸಭಾನಾಯಕರು ಮತ್ತು ನಮ್ಮ ನಾಯಕರು ಬೆಂಬಲಿಸಿದ್ದಾರೆ. ಮಾನ್ಯ ರಾಮಚಂದ್ರ ವೀರಪ್ಪನವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದು 7 ಸಾರಿ ಲೋಕಸಭಾ ಸದಸ್ಯರಾಗಿದ್ದರು, ಮತ್ತೆ 2 ಸಾರಿ ವಿಧಾನ ಸಭೆ ಮತ್ತು ಒಂದು ಸಾರಿ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಶ್ರೀಯುತರು ನಮ್ಮನ್ನೆಲ್ಲಾ ಆಗಲಿ ಹೋಗಿದ್ದಾರೆ. ಈ ಒಬ್ಬ ಧೀಮಂತ ನಾಯಕ ಅಗಲಿರುವುದಕ್ಕೆ ನಮ್ಮ ಹೈದರಾಬಾದ್ ಕರ್ನಾಟಕಕ್ಕೆ ಕತ್ತಲು ಬಿದ್ದಂತಾಗಿದೆ. ಇವರ ಬಗ್ಗೆ ಎಷ್ಟು ಹೇಳಿದರೂ ಕೂಡ ಇನ್ನು ಹೇಳುವಂಥದ್ದು ಸಾಕಷ್ಟು ಇರುತ್ತದೆ. ಮಾನ್ಯ ರಾಮಚಂದ್ರ ವೀರಪ್ಪನವರ ಕ್ಷೇತ್ರದ ಸಮೀಪದಲ್ಲಿಯೇ ನನ್ನ ಕ್ಷೇತ್ರವೂ ಕೂಡ ಬರುತ್ತದೆ. ಚುನಾವಣೆ ಬಂದಂಥ ಸಂದರ್ಭದಲ್ಲಿ ಅವರು ಪ್ರಚಾರಕ್ಕೆಂದು ಹೋಗುತ್ತಿರಲಿಲ್ಲ. ಚುನಾವಣೆ ಸಂದರ್ಭದಲ್ಲಿ ಅವರು ಮನೆ ಮುಂದೆ ಕುಳಿತುಕೊಂಡಿದ್ದಂಥ ಸಂದರ್ಭದಲ್ಲಿ ಯಾರಾದರೂ ಅಲ್ಲಿಗೆ ಹೋಗಿ ತಾವು ಮನೆಯಲ್ಲಿಯೇ ಕುಳಿತುಕೊಂಡಿದ್ದೀರಿ, ಚುನಾವಣೆ ಪ್ರಚಾರಕ್ಕೆ ಬರುವುದಿಲ್ಲವೇ ಎಂದು ಕೇಳಿದ್ದಕ್ಕೆ ಅವರೊಂದು ಮಾತನ್ನು ಹೇಳುತ್ತಿದ್ದರು. ಅದೇನೆಂದರೆ, ಜನ ನನಗೆ ವೋಟನ್ನು ಕೊಟ್ಟೆಕೊಡುತ್ತಾರೆ, ಈಗ ಹಣಕ್ಕೋಸ್ಕರ ನೀವು ನನ್ನ ಹತ್ತಿರ ಬಂದಿದ್ದರೆ, ನನ್ನ ಹತ್ತಿರ ಹಣ ಇಲ್ಲ, ಮತ್ತೆ ನೀವು ಪ್ರಚಾರ ಮಾಡುವವರಲ್ಲ. ನನಗೆ ನಿಮ್ಮ ವೋಟೇ ಬೇಡ ಎಂದು ಹೇಳತಕ್ಕಂಥ ಧೈರ್ಯವಂಥ ನಾಯಕರಾಗಿದ್ದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಅವರನ್ನು ಅಂಡಮಾನ್ ನಿಕೋಬಾರ್ ಜೈಲಿಗೆ ಕರೆದುಕೊಂಡು ಹೋಗಿದ್ದರು ಎನ್ನತಕ್ಕಂಥ ವಿಷಯವನ್ನು ಹೇಳುತ್ತಿದ್ದರು. ಮತ್ತು ನಮಗೆ ಕೆಲವು ಮಾರ್ಗದರ್ಶನ ಕೂಡ ಕೊಡುತ್ತಿದ್ದರು. ಅವರ ಧರ್ಮಪತ್ನಿ ಅಳುತ್ತಿದ್ದಾಗ ಅವರು ಧೈರ್ಯದಿಂದ ಒಂದು ಮಾತನ್ನು ಹೇಳಿದ್ದರು. ಅದೇನೆಂದರೆ, ನೀವು ಇನ್ನೂ ಸಣ್ಣ ವಯಸ್ಸಿನವಳಾಗಿದ್ದೀಯ. ನಾನು ಮತ್ತೆ ಅಲ್ಲಿಂದ ವಾಪಸ್ಸು ಬರುತ್ತೇನೋ ಅಥವಾ ಇಲ್ಲವೋ ಗೊತ್ತಿಲ್ಲ. ಆದ್ದರಿಂದ ನಿನ್ನ ಜೀವನವನ್ನು ಹಾಳು ಮಾಡಿಕೊಳ್ಳಬೇಡ; ಬೇಕಾದರೆ ಇನ್ನೊಂದು ಲಗ್ನ ಮಾಡಿಕೊ ಎಂದು ಧೈರ್ಯದಿಂದ ಹೇಳಿದಂಥ ಒಬ್ಬ ಧೀಮಂತ ನಾಯಕ. ಶ್ರೀಯುತರು ಇವತ್ತಿನ ದಿವಸ ನಮ್ಮನ್ನೆಲ್ಲಾ ಆಗಲಿ ಹೋಗಿದ್ದಾರೆ. ಅವರ ಜೀವನ ಚರಿತ್ರೆಯನ್ನು ಬರೆದು ಪೂರ್ತಿಯಾಗಿ ಒಂದು ಪುಸ್ತಕವನ್ನು

ಮಾಡಿದ್ದಾರೆ, ಅವರ ಆಶೆ ಆಕಾಂಕ್ಷೆ ಏನಿತ್ತು ಎಂದರೆ, ಮಾನ್ಯ ಅಟಲ್‌ಬಿಹಾರಿ ವಾಜಪೇಯಿಯವರ ಕೈಯಿಂದ ಆ ಪುಸ್ತಕವನ್ನು ಬಿಡುಗಡೆ ಮಾಡಿಸಬೇಕೆಂದು ಬಹಳ ಆಶೆ ಇತ್ತು, ಆದರೆ ಅದು ಆಗಲಿಲ್ಲ. ಇವತ್ತು ಅವರು ನಮ್ಮನ್ನು ಅಗಲಿದ್ದಾರೆ, ನಾನು ಸರ್ಕಾರಕ್ಕೆ ವಿನಂತಿಯನ್ನು ಮಾಡಿಕೊಳ್ಳುತ್ತೇನೆ, ಅನೇಕ ಜನ ನಮ್ಮ ಪ್ರಮುಖರು ಪ್ರಸ್ತಾಪ ಮಾಡಿದ್ದಾರೆ, ಅವರ ಮೂರ್ತಿಯ ಪ್ರತಿಷ್ಠಾಪನೆಯನ್ನು ಜಿಲ್ಲೆಯಲ್ಲಿ ಒಳ್ಳೆಯ ಜಾಗದಲ್ಲಿ ಮಾಡಬೇಕು. ಅದರಂತೆ ನಮ್ಮ ಪಕ್ಷದ ಮಾನ್ಯ ಉಪನಾಯಕರು ಹೇಳಿದಂತೆ, ಅವರ ಹೆಸರಿನ ಮೇಲೆ ವಸತಿ ಶಾಲೆಯನ್ನು ಮಾಡಿ ಶಿಕ್ಷಣಕ್ಕೆ ಒಂದು ಅನುಕೂಲ ಮಾಡಿಕೊಟ್ಟರೆ ಅವರು ಇಷ್ಟು ದಿವಸ ರಾಜ್ಯಕ್ಕೆ ಕೊಡುಗೆ ಕೊಟ್ಟಿದ್ದಕ್ಕೆ ಸಾರ್ಥಕವಾಗುತ್ತದೆಂದು ಹೇಳಿ ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ವಿನಂತಿಯನ್ನು ಮಾಡುತ್ತೇನೆ. ಅದರ ಜೊತೆಯಲ್ಲಿಯೇ ಶ್ರೀ ವೆಂಕಟಗಿರಿಗೌಡರು ಕೂಡ ಇಂದು ನಮ್ಮನ್ನು ಆಗಲಿ ಹೋಗಿದ್ದಾರೆ, ಅವರ ಮನಸ್ಸಿಗೆ ಶಾಂತಿ ಸಿಗಲಿ, ಅವರ ಮನೆತನಕ್ಕೆ, ಅವರ ಅಭಿಮಾನಿಗಳಿಗೆ ದುಃಖವನ್ನು ಭರಿಸಲು ಶಕ್ತಿಯನ್ನು ಆ ಭಗವಂತನು ಕೊಡಲಿ ಎಂದು ನಾನು ಭಗವಂತನಲ್ಲಿ ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) : ಮಾನ್ಯ ಅಧ್ಯಕ್ಷರೆ, ಈ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ಸೂಚಿಸುತ್ತಾ, ಶ್ರೀ ರಾಮಚಂದ್ರ ವೀರಪ್ಪನವರು ಲೋಕಸಭೆಯಲ್ಲಿ ಹಳೆಯ ಸಂಸದರು, ಎಲ್ಲರಿಗಿಂತಲೂ ಹಿರಿಯರಾಗಿದ್ದರು. ಅವರೊಬ್ಬ ದೇಶಭಕ್ತರು, ಸ್ವಾತಂತ್ರ್ಯ ಹೋರಾಟಗಾರರು, ಅವರು ಯಾವಾಗಲೂ ಧಾರ್ಮಿಕ ಕಾರ್ಯಗಳಲ್ಲಿ ಬಹಳಷ್ಟು ಶ್ರಮಪಟ್ಟವರಾಗಿದ್ದರು. ಶ್ರೀ ರಾಮಚಂದ್ರ ವೀರಪ್ಪನವರು ಹೈದ್ರಾಬಾದ್ ಸ್ಟೇಟ್‌ನಲ್ಲಿ ಸದಸ್ಯರಾಗಿದ್ದರು, ಹೈದ್ರಾಬಾದ್ ಕರ್ನಾಟಕದಿಂದ ಎರಡು ಸಲ ವಿಧಾನಸಭೆ ಸದಸ್ಯರಾಗಿದ್ದರು. ಹೈದ್ರಾಬಾದ್ ಕರ್ನಾಟಕದಲ್ಲಿ ಅವರು ವಿಧಾನಸಭಾ ಸದಸ್ಯರಾಗಿದ್ದಾಗ ಬೀದರ್ ಜಿಲ್ಲೆಯ ಅಭಿವೃದ್ಧಿಗೆ ಬಹಳಷ್ಟು ಪ್ರಯತ್ನವನ್ನು ಮಾಡಿದ್ದಾರೆ. 7 ಸಲ ಲೋಕಸಭಾ ಸದಸ್ಯರಾಗಿ ತಮ್ಮ ರಾಜಕೀಯ ಜೀವನದಲ್ಲಿ ಅಜಾತಶತ್ರುವಾಗಿ ಕೆಲಸವನ್ನು ಮಾಡಿದ್ದಾರೆ. ರಾಜಕೀಯ ಜೀವನದಲ್ಲಿ ಬಹಳಷ್ಟು ಜನ ಅಪೋನೆಂಟ್ಸ್ ತಯಾರಾಗುತ್ತಾರೆ, ವೈರಿಗಳು ತಯಾರಾಗುತ್ತಾರೆ. ಆದರೆ ಶ್ರೀ ರಾಮಚಂದ್ರ ವೀರಪ್ಪನವರಿಗೆ ಯಾರೂ ರಾಜಕೀಯ ವಿರೋಧಿಗಳು ಇರಲಿಲ್ಲ. ರಾಜಕೀಯ ವೈರಿಯೂ ಇರಲಿಲ್ಲ. ಅವರು ಅಂತಹ ವ್ಯಕ್ತಿತ್ವವನ್ನು ಹೊಂದಿದವರಾಗಿದ್ದರು. ಮಾನ್ಯ ರಾಮಚಂದ್ರ ವೀರಪ್ಪನವರ ಬಗ್ಗೆ ಶ್ರೀ ರೇವುನಾಯಕ್ ಬೆಳಮಗಿಯವರು ಹೇಳಿದ ಹಾಗೆ ನಮಗೂ ಕೂಡ ಅವರು ತಮ್ಮ ಕೈಯಲ್ಲಿ ಹೊಕ್ಕಿದ್ದ ಗೋಲಿಗಳನ್ನು ಬಹಳಷ್ಟು ಸಲ ತೋರಿಸುತ್ತಿದ್ದರು. ದೇಶಸೇವೆಯ ಸಲುವಾಗಿ ಅವರು ಏನು ಕಾರ್ಯವನ್ನು ಮಾಡಿದ್ದಾರೆ, ಅದರ ಬಗ್ಗೆ ನಮಗೆ ಅವರು ಮಾರ್ಗದರ್ಶನ ಮಾಡುತ್ತಿದ್ದರು. ಬೀದರ್ ಜಿಲ್ಲೆಯ ಭಾಲ್ಕಿ ಕ್ಷೇತ್ರದ ಶಾಸಕನಾದ ನಾನು ಅವರ ಜೊತೆಯಲ್ಲಿ ಕಳೆದ ನಾಲ್ಕುವರೆ ವರ್ಷ ಸಾಮಾಜಿಕ, ರಾಜಕೀಯ ಜೀವನದಲ್ಲಿ ಅವರ ಜೊತೆಯಲ್ಲಿ ಕೆಲಸ ಮಾಡುವುದಕ್ಕೆ ನಮಗೆ ಸಮಯ ಸಿಕ್ಕಿದೆ. ಶ್ರೀ ರಾಮಚಂದ್ರ ವೀರಪ್ಪನವರ ಅಂತ್ಯಕ್ರಿಯೆ ನಿನ್ನೆ ದೊಡ್ಡ ಪ್ರಮಾಣದಲ್ಲಿ ನಡೆದಾಗ, ರಾಜ್ಯ ಮತ್ತು ರಾಷ್ಟ್ರ ನಾಯಕರುಗಳು ಬಂದಿದ್ದರು.

ಶ್ರೀ ರಾಮಚಂದ್ರ ವೀರಪ್ಪನವರು ಇಂದು ನಮ್ಮ ಜೊತೆಯಲ್ಲಿಲ್ಲ. ಒಳ್ಳೆಯ ಮುತ್ಸದ್ದಿ ಒಳ್ಳೆಯ ಹಿರಿಯ ರಾಜಕಾರಣಿಯನ್ನು ಕಳೆದುಕೊಂಡು ಇಡೀ ಬೀದರ್ ಜಿಲ್ಲೆಗೆ, ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ಮತ್ತು ನಮಗೆಲ್ಲರಿಗೂ ಬಹಳಷ್ಟು ನೋವಾಗಿದೆ, ಹಾನಿಯು ಆಗಿದೆ. ಅಜಾತಶತ್ರುವಾಗಿ ಶ್ರೀ ರಾಮಚಂದ್ರ ವೀರಪ್ಪನವರು ತಮ್ಮ ರಾಜಕೀಯ ಮತ್ತು ವೈಯಕ್ತಿಕ ಜೀವನವನ್ನು ಕಳೆದಿದ್ದಾರೆ. ಶ್ರೀ ರಾಮಚಂದ್ರ ವೀರಪ್ಪನವರ ಹೆಸರು ನಮ್ಮ ಬೀದರ್ ಜಿಲ್ಲೆಯಲ್ಲಿ ಶಾಶ್ವತವಾಗಿ ಉಳಿಯುವಂತೆ ಸರ್ಕಾರ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ಕಾಳಜಿವಹಿಸಿ ಏನಾದರೂ ಮಾಡುತ್ತಾರೆಂದು ನಾನು ನಂಬಿಕೊಂಡಿದ್ದೇನೆ; ಪ್ರೊ: ವೆಂಕಟಗಿರಿಗೌಡರು ಹಳೆಯ ಸಂಸದರು, ಹಿರಿಯರು ನಮ್ಮನ್ನು ಅಗಲಿರುವುದರಿಂದ ನಮಗೆ ಬಹಳಷ್ಟು ಹಾನಿಯಾಗಿದೆ, ಅವರ ಆತ್ಮಕ್ಕೆ ಶಾಂತಿ ಸಿಗಬೇಕು, ಅವರ ಕುಟುಂಬಕ್ಕೆ ದೇವರು ಧೈರ್ಯವನ್ನು ಕೊಡಬೇಕು ಎಂದು ಹೇಳಿ, ನನ್ನ ಎರಡು ಸಂತಾಪ ಸೂಚಕಗಳನ್ನು ಮುಗಿಸುತ್ತಾ, ತಾವು ನನಗೆ ಮಾತನಾಡಲು ಸಮಯವನ್ನು ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು : ತಮಿಳುನಾಡಿನ ಕುಂಭಕೋಣಂನಲ್ಲಿ ಒಂದು ಶಾಲೆಯಲ್ಲಿ ಹಲವು ಮಕ್ಕಳ ಸಾವಿಗೆ ಕಾರಣವಾದ ಬೆಂಕಿ ಅನಾಹುತ ಗಹನವಾದುದು, ಅಲ್ಲದೆ ಅತ್ಯಂತ ದೊಡ್ಡ ಬೆಂಕಿ ಅನಾಹುತ, ಇಂತಹ ಅಹಿತಕರ ಘಟನೆ ಪುನರಾವರ್ತನೆಯಾಗದಿರಲಿ, ಹಾಗೂ ಹಸುಳೆಗಳನ್ನು ಕಳೆದುಕೊಂಡ ಆ ತಂದೆ–ತಾಯಿಗಳಿಗೆ ಮತ್ತು ಅವರ ಬಂಧುಗಳಿಗೆ ದುಃಖವನ್ನು ಭರಿಸುವ ಶಕ್ತಿ ಒದಗಲೆಂದು ನಾನೂ ಸಹ ಮಾನ್ಯ ಸದಸ್ಯರುಗಳ ಭಾವನೆಗಳಿಗೆ ಸ್ಪಂಧಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಒಂದು ನಿಮಿಷ ಎದ್ದುನಿಂತು ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು : ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬದವರಿಗೆ ಕಳುಹಿಸಿ ಕೊಡಲಾಗುವುದು. ಈಗ ಪ್ರಶ್ನೋತ್ತರ ಸಮಯ ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು.

2) ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ:

ಛಾಪಾ ಕಾಗದ ಹಗರಣದಲ್ಲಿ ನಿವೃತ್ತ ಪೊಲೀಸ್ ಅಧಿಕಾರಿ ಸಂಗ್ರಾಮ್‌ಸಿಂಗ್ ಸಿ.ಬಿ.ಐ.ನಿಂದ ಬಂಧನವಾದ ಮೇಲೆ ನೀಡಿರುವ ಹೇಳಿಕೆ ಬಗ್ಗೆ

+ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ನಾನು ಪ್ರತಿಪಕ್ಷದ ನಾಯಕನಾಗಿರುವುದರಿಂದ ದಯಮಾಡಿ ನಾನು ಹೇಳುವ ನಾಲ್ಕು ಮಾತುಗಳನ್ನು ತಾವು ಕೇಳಿ, ಅಮೇಲೆ ಬೇಕಾದರೆ ತಾವು ಏನಾದರೂ ತೀರ್ಪನ್ನು ಕೊಡಿ, ನಾನು ತಮಗೆ ತಲೆಬಾಗುತ್ತೇನೆ. ನಾನು ತಮ್ಮಲ್ಲಿ ಹಾಗೂ ಆಡಳಿತ ಪಕ್ಷದ ಸ್ನೇಹಿತರಲ್ಲಿ ವಿನಂತಿಯನ್ನು ಮಾಡುವುದು, ಹೋದಬಾರಿ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಬೇರೆ ಬೇರೆ ಕಾರಣಕ್ಕಾಗಿ ಆಗಲಿಲ್ಲ, ಅದರ ಅರಿವು ನಮ್ಮೆಲ್ಲರಿಗೂ ಇದೆ.